೨೬

ವ॥ ಕಾಳಸಂಬರಂ ಮಗನದೊಂದು ತ್ಸಾಹಮಂ ಕೇಳ್ದು ಮೆಚ್ಚಿ ನೀನಱಿವೆಯೆನೆ ಬೆಸನಂ ಪಡೆದುದಕ್ಕೆ ಸಂತೋಷಂಬಟ್ಟು ಪೊಡೆವಟ್ಟು ಪೊಟಿಲಿಂ ಪೊಱಮಟ್ಟು ಬಿಟ್ಟಿರ್ದನಾಗಳರಸಂ ತನ್ನ ಚಾತುರ್ದಂ ತಬಲಮಂ ಮಗನೊಡನೆ ಪೇೞ್ದೊಡೆ ಮಱುದಿವಸಂ ಪಯಣಂಬೋಗಿ ಕೆಲವು ದಿವಸದಿಂನ್ ಶ್ರೀಪುರಮನೆಯ್ದಿ ಬಿಟ್ಟಿರ್ದುದನಗ್ನಿರಾಜಂ ಕೇಳ್ದು ತನ್ನ ಪೆಸರ್ಮ್– ನನ್ನಿಮಾಡಿ ಕೋಪಾಗ್ನಿ ಪೆರ್ಚಿ ತನ್ನ ಸಮಸ್ತಬಲಂ ಬೆರಸು ಪೊಱ ಮಟ್ಟೊಡ್ಡಿದನಂತೆರಡುಂ ಪಡೆಗಳೊಡ್ಡಿ ಕೆಯ್ಯಂ ಬೀಸಿದಾಗಳ್ ಬಿಲ್ ಬಿಲ್ಲೊಳ್ ದಟಿಂ ದಟಿದೊಳ್ ತೇರ್ ಱೇರೊಳಾನೆಯಾನೆಯೊಳಣಿಯಣಿಯೊಳ್ ತಾಗಿ ಕಾದಿದಾಗ[ಳ್] ತನ್ನ ಪಡಲ್ಪಟ್ಟುದನಗ್ನಿರಾಜಂ ಕಂಡು ವಿದ್ಯಾಯುದ್ಧಮಂ ಪೊಣರ್ಚಿದಾಗಳ್ ಪ್ರದ್ಯುಮ್ನ ಪ್ರತಿವಿದ್ಯೆಗಳಿಂ ಭೇದಿಸಿ ಗೆಲ್ದೆಯ್ದಿ ನೂಂಕಿದೊಡವಂ ತಡೆದೋಡಿಸಿ ನಿಂದುದಂ ಕುಮಾರಂ ಕಂಡು

ಕಂ॥ ಕಡುಮುಳಿದು ವಿರಥನಾಗೆ
ಚ್ಚೆಡೆಮಡಗದೆ ಪೊಯ್ದು ನೆಗಟ್ದಿ ರಿಪುಭೂಮಿಪನಂ
ಪಿಡಿದುಡಿಯೆ ಕಟ್ಟಿ ಚೋದ್ಯಂ
ಬಡೆ ಪಡೆ ನಿಜವಿಜಯಭೇರಿವೊಯ್ಸಿ ಕುಮಾರಂ

೨೭

ವ॥ ಅಂತಾತನಂ ಕಟ್ಟಿ ಭೀತರನೆರ್ಬಟ್ಟಿ ಪೊಟಿಲಂ ಪೊಕ್ಕು ಸಾರವಸ್ತುಗಳಂ ಕೊಂಡು ಮುಗುಟ್ದು ಪಯಣಂ ಬಂದು ಮೇಘಕೂಟಪುರಮನೆಯ್ದಿ ಕೂರ್ತರ್ ಮನಂಗೊಳೆ ಬಿಗುರ್ತರಸುಂಗೊಳೆ ಪುರಜನಮಿದಿರ್ಗೊ[ಳೆ] ಪೊಟಿಲಂ ಪೊಕ್ಕು ಕಾಳಸಂಬರನುಂ ಕಾಂಚನಮಾಲೆಯುಂ ಕಂಡು ಪೊಡೆವಟ್ಟಗ್ನಿರಾಜನ ಸೆಱಯನೊಪ್ಪು ಗೊಳ್ಳಿಮೆಂದ ಮಗನ ಪರಾಕ್ರಮಕ್ಕೆ ರಾಜ್ಯಕ್ರಮದ ಕಂಠಿಕೆಯಂ ಪುಟ್ಟಿದಂದೆ ಕಟ್ಟಿದೆನಾದೊಡಂ ನೀಮೆಲ್ಲಮಱಿಯೆ ಕೊಟ್ಟಪೆನೀತಂ

ಕಂ॥ ಕಿಱಿಯನೆನವೇಡ ರಾಜ್ಯದ
ಪೊಱೆಯ ಭರಕ್ಕಾವನಾರ್ಕುಮಾತನೆ ಪಿರಿಯಂ
[ಪೆ]ಱದೇಂ ಪ್ರದ್ಯುಮ್ನಂ ಗಳ
ವಱದೊಂ ಯುವರಾಜಪದವಿಯಂ ಮಾಡಿದಪೆಂ

೨೮

ವ॥ ಎಂದೊಸಗೆಱಯಂ ಪೊಯ್ಸಿ ಕಾಂಠಿಕೆಯಂ ಕಟ್ಟಿ ಕ್ಟ್ತೆರೆ ಬಂದಗ್ನಿರಾಜನಸೆಱ ಮೊದಲಾಗೊಡೆಯ ಸೆಱಗಳಂ ಬಿಟ್ಟು ನಿಶ್ಚಿಂತಮಿರೆ ಕೆಲವು ದಿವಸದಿಂ ಕುಮಾರನ ಪೆರ್ಚಿಗಂ ಪ್ರಜೆಯ ಮಚ್ಚಿಂಗಂ ರೂಪಿನೊಳ್ಪಿಂಗಂ ಗುಣದ ತಣ್ಪಿಂಗಂ ಪ್ರತಾಪದುಗ್ರತೆಗಂ ಪುಣ್ಯದಗ್ರತೆಗಂ ಮನದ ಬಲ್ಪಿಂಗಂ ನುಡಿಯ ಮೆಲ್ಪಿಂಗಂ ತೇಜದಳುರ್ಕೆಗಂ ಸಿರಿಯ ನಿಮಿರ್ಕೆಗಂ ವೈಭೋಗಕ್ಕಂ ಶೌಚನಿಯೊಗಕ್ಕಂ ನೆಗಟ್ದಾಯಕ್ಕಂ ತಕ್ಕ ಬೀಯಕ್ಕಂ ವಿದ್ಯಾವಿಭೂಷಣಕ್ಕಂ ಸಮರವಿಭೀಷಣಕ್ಕಂ ಕಾಳಸಂಬರನ ಪಿರಿಯಮಕ್ಕಳ್ ವಜ್ರದಾಡಾದಿಗಳಪ್ಪಯ್ವದಿಂಬರುಂ ಕಾಯ್ದು ಛಿದ್ರಿಸಿ ಕೊಲ್ವ ಬಗೆಯಂ ಬಗೆದು ಕುಮಾರ ನೊಳ್ ಮೇಳ್ಕೊಂಡು ಬಾ ನಾಮಿಂತಿರಲ್ವೇಡಂ ಗೋಚರಸ್ಥಾನಂಗಳ್ ವಿದ್ಯಾಲಾಭ ಮೊಳವವಂ ಕೊಳ್ವಮೆಂದೊಡಗೊಂಡು ಪೋಗಿ ಸಿದ್ಧಕೂಟಮೆಂಬ

ಪುರಾಣಚೈತ್ಯಾಲಯಮಂ ಬಲಗೊಂಡು ದೇವರಂ ಬಂದಿಸಿರ್ದದಱ ಮೇಗಣ ನೆಲೆಯೊಳ್ ದೃಷ್ಟಿವಿಷ್ಯರಿಮಾಂ ಮಹೊರಗರಕ್ಷಿತ ಮಿದೆಗಳೊಳವ ೋ[ವ]ೋಕ್ಕಳದೆ ಪುಕ್ಕಂಗೆ ಸಾಧಮಕ್ಕುಮೆಲ್ಲಮಿಲ್ಲಿ ರಿಮಾಂ಼ ಪುಗುವೆನೆಂದ ವಜ್ರದಾಡನ ಮಾತಂ ಕೇಳ್ದು ಕುಮಾರಂ ನಿಮ್ಮ ಬೆಸದೊಳಾಂ ಪೊಕ್ಕುನೋಟ್ಟಿನೆಂ ೀ[ದು]ೀ ರಿಬಾಗಿಲಂ ತೆಱೆದೊಡೆ

ಕಂ|| ಪೆಡೆಗಳೆನಿತನಿತುಮಂ ಕೊ
ಳ್ವೆಡೆಗೆಯ್ದೊಡನೊಡನೆ ಬಿಡದೆ ಕಿಡಿಗಳನುಗುಱ
ತ್ತಡಿಗಡಿಗೆ ನಿಮಿರ್ದು[ಂ] ಬರೆ
ತಡೆಯ್ದೆ ಫಣಿಯಂತೆ ಪಾಱಿ ಬಿರ್ದತ್ತಾಗಳ್

೨೯

ವ|| ಅಂತು ಬಿರ್ದು ನಾಗರಾಜನಾಗಿ ಬಂದು ನಿಂದು ನಿನಗೆ ಸಧ್ಯಮಾದುದೀ ವಿದ್ಯೆಗಳಂ ಕೈಕೊಳ್ಳೆಂದು ಸಮವಿದ್ಯೆಯುಮನತಿವಿದ್ಯೆಯುಮಂ ಕಾಮಚಾಂಡಾಳಿಯುಮಂ ವಿಷ್ಟರಚಾಮರಂಗಳುಮಂ ಆತಪತ್ರಮುಂ ಪಾವುಗೆಗಳುಮಂ ತೋಱಿ ಮುನ್ನಿಂತೊರ್ಬ ವಿದ್ಯಾಧರನಿದಂ ಸಾಧಿಸಿ ತಪಕ್ಕೆ ಪೋಗುತಿಂತಪ್ಪೆಡೆಯೊಳಿವಂ ಕಾದಿರ್ದು ಮಿಂತಳ್ಕದೆ ಪಾಯ್ದೊಗೊಪ್ಪಿಸೆಂದಿರಿಸಿಪೋದಂ ಕೈಕೊಳ್ಳೆಂದೊಡಂತೆಗೆಯ್ವೆನೆನ್ನ ಬಗೆ ದಾಗಳ್ ಬಕ್ಕೆಂದಿರಿಸಿ ಪೊಱಮಟ್ಟುಬ್ಮ್ದನದಂ ಕಂಡು ಆಚ್ಚರಿವಟ್ಟು ವಜ್ರದಾಡಾದಿ ಗಳೊಡಗೊಂಡು ಪೋಗಿ ನಂದದುರಿಯುತ್ತಿರ್ದ ಪಿರಿದೊಂದು ಕೊಂಡಮಂ ತೋಱುವುದುಂ

ಕಂ|| ಧಗಧಗಿಸಿ ಮಸಗಿ ದಳ್ಳುರಿ
ನೆಗೆತರೆ ಪಾಯ್ದಂಗೆ ಮೆಚ್ಚಿ ತಣ್ಣದನಾ ೋ[ಗ]ೋ ತೊ
ಳಗಿದಗ್ನಿದೇವ ನನ್ನಿಯೊ
ಳೊಗೆದವಿವೆಂದಿತ್ತನುಚಿತ ಪೋತಾಂಬರಮಂ

೩೦

ವ|| ಅಂತು ಪಡೆದು ಪೊಱಮಡೆ ಮನದೊಳ್ ಕಟ್ಟುಕಡೆದೆರ್ದೆಯೊಡೆದು ಮತ್ತಮೊಡಗೊಂಡುಪೋಗಿ ತಗರರೂಪಿನ ಶಿಲೆಯಂದದೊಂದೊಂದಂ ಪಾಯುತ್ತಿರ್ಪುವಿವರ ನಡುವಂ ಪೊಕ್ಕು ಸಾಧಿಸಿದೊಂಗೆ ಫಲಮಕ್ಕುಮೆಂದು ಮೇಷಯಂತ್ರಮಂ ತೋಱಿದಾಗಳ್

ಂ|| ಸಂಕಿಸದೆ ಪೊಕ್ಕು ಪೊಯ್ವೆರ
ಡುಂ ಕಲ್ಗಳನೆರಡುಂ ಕೆಯ್ಯೊಳ್ ಪೊಯ್ಯೆ ಸಿಡಿ
ೀ[ಲ್ದಂ]ೀ ಕದ ಮೇಷಪುರಂ ಪೋ
ಲ್ತಂಕದ ತೆಱನಾಗಿ ಕುಂಡಲಂಗಳನಿತ್ತಂ

೩೧

ವ|| ಅಂತಲ್ಲಿ ಪಡೆದ ಮಕರಕುಂಡಲಂಗಳಂ ಪೆತ್ತ ಸಾಹಸಮಂ ಕಂಡು ಮತ್ತ ಮೊಯ್ದು ಭಯಂಕರಮಾಗಿರ್ದ ಸೂಕರಶೈಲಮಂ ತೋಱಿಡೊಡೆ ಕುಮಾರಂ

ಕಂ|| ಭೀಕರಮಂ ಶೈಲಮಹಾ

ಸೂಕರಮಂ ಕಂಡು ಪೊಕ್ಕು ಪೊಯ್ದಡೆ ಭಯದಿಂ
ದೇಕೆನಗೆ ಮುನಿದೆಯೆಂದೆ
ದರ್ಾಕುಳದಿಂ ವಿಜಯಘೋಷ ಶಂ [ಖ] ಮನಿತ್ತಂ

೩೨

ವ॥ ಅದಂನ್ ಕಂಡು ಚೋದ್ಯಂಬಟ್ಟು ನಿನಗಾವುದುಂ ಸಾಧ್ಯಮಲ್ಲದು ದಿಲ್ಲೆಂದು [ನಿಶ್ಚೈಸಿ] ದ್ವೀಪಾಂತರಕ್ಕೆ ಬಂದಾಯತಗುಹೆಯಂ ತೋಱಿದಾಗಳ್

ಕಂ॥ ಪಿರಿದು ಕರಂ ಕತ್ತ್ಲೆಯಿಂ
ಕರಿದು ಪುಗಲ್ಲರಿದು ಗುಹೆಯಿದೆನ್ನಧೆ ಪ್ಪೂಕ್ಕಂ
ಗೆರಡಿಲ್ಲದಂಜಿ ಗದೆಯಂ
ಕರಯುಗಮಂ ಮುಗಿಧು ಕಾಳರಾಕ್ಕಸನಿತ್ತ್ಂ

ವ ಅದಂ ಕಂಡು ಪೊಱಮಟ್ಟು ಬಂಧುದಂ ಕಂಡು ನಮ್ಮ ಬಗೆದಪಾಯ ಮಿತಂಗೆ ಲಾಬೋಪಾಯಮಪ್ಪುದೆಂದು ಬಗೆದು ಕ್ಕ್ರುತಕೋಗಳಿಂ ನಂಬಿಸಿಕೊಂಡು ಪೂರ್ವ ಮಲ್ಲಗಿರಿಗಳಂ ತೊಱಿಃದೊಡೆ

ಕಂ॥ ಮಲ್ಲರ್ ಪೋರ್ವಂತಿರೆ ಪೋ
ರ್ವಲ್ಲಿಗೆ ಪಾಯ್ದೆಡೆಯೊಳಿರ್ದು ನೂಂಕಿದೊಡೆರಡುಂ
ತಲ್ಲಣಿಸಿ ಕೆಡೆಯೆ ಭಯದಿಂ
ಮಲ್ಲಾಸುರನುಪಮೆಗಱಿದ ಹಾರಮನಿತ್ತಂ

೩೪

ವ॥ ಅಸುರನಂತು ಬೇಱಿತ್ತಮಾ ವನದಮೂಲ್ಯಮಪ್ಪ ಹಾರಮನಿತ್ತುದುಮಂ ಕಂಡು ಬೆಕ್ಕಸಂಬಟ್ಟೆನ್ನೇಕಿಪ್ಪೆ ಮೆಲ್ಲಿರ್ದ ವಸ್ತುಗಳಂ ನಿನ[ಗ]ಸಾಧ್ಯ ಮಾಗದುವಿಲ್ಲ ಕೊಳ್ವಂ ಬಾಯೆಂದೊಯ್ದು ಮರ್ಕಟಶಿಲೆಯೆಂಬುದಂ ತೋರ್ಪುದೆಂದಡಡಂ ಕಂಡು ಪೋಗಿ

ಕಂ॥ ಕೋಡಗರೂಪದ ದಾನವ
ನೇಡಿಸುವನಿತಲ್ಲದೇವನೆಂದನಿತಱೊಳ
ಲ್ಲಾಡಿಪೆ ಮನದಿಂ ಬೇಗಂ
ಕ್ರೋಡಾಸುರನುಪಮೆಗಱಿದ ಮಕುಟಮನಿತ್ತಂ

೩೫

ವ॥ ಅಲ್ಲಿಯುಮಪೂರ್ವಲಾಭಮಂ ಕಂಡೆಲ್ಲಿಯುಂ ನಿನ್ಗೆ ಬಿರ್ದಮಿಲ್ಲ ಬಾಯೆಂ [ದಱಿ]ದೊಯ್ದು ಪೊಂಬಣ್ಣದ ಮತ್ತಿಯಮರದ ಮೇಗಿರ್ದುದು ವಿಷಧರ ಮದಂ ಸಾಧಿಸಿದೊಡೆ ಫಲಸಿದ್ಧ್ಹಿಟೆನೆ ಕುಮಾರನಾ ಮರನನಡರ್ದೇಱಿದಾಗಳ್

ಕಂ॥ ಏಱಿದೊನೆ ಮರನನೆನ್ನಂ
ಮಿಱಿದನುಱಿದಡಸಿ ಪಿಡಿದು ಪೇರಿದನಥಟಂ
ತೋಱಿದನೊಡೆವ[ಂ] ಮೂಗಿ
ಟ್ಟೇಱಿದನೆಂದಳ್ಕಿ ಬಾಳನಹಿಪತಿಯಿತ್ತಂ

೩೬

ವ॥ ಅದಂ ಕೊಂಡು ಮರದಿಂದಮಿೞಿದುಬರೆ ಬೆಕ್ಕಸಂಬಟ್ಟು ಬಾಯಂಬಿಟ್ಟು ಮತ್ತೊಂದೆಡೆಗೊಯ್ದೌ ಪಿರಿದೊಂದು ನಾಗಭವನಮಂ ತೋಱಿದೊಡಮದಂ ನೋಡಿ

ಕಂ॥ ಆ ನಾಗಭವನಮಂ ಪೊ
ಕ್ಕೇನುಂ ಸಂಕಿಸದೆ ನಿಂದುದಕ್ಕಹಿರಾಜಂ
ಕಾನಮಿಮಾನಮುಮಂ ಕ
ಚ್ಛಮಹಾಖ್ಯಮಂ ಬೀಣೆಯುಮಂತದುಮಿತ್ತನತ್ಯುತ್ಸವದಿಂ (?)

೩೭

ವ॥ ಅಂತಿತ್ತೊಡವಂ ಕೊಂಡುಬಂದುದಕ್ಕೆ ಮೆಚ್ಚದೆಯುಂ ಮಚ್ಚಿ ಮತ್ತೊಂದೆಡೆ ಯೊಳತಿಶಯಲಾಭಮುಂಟೆಂದೊಯ್ವಶ್ವಶೈಳಮಂ ತೋರ್ಪುದುಂ

ಕಂ॥ ತುರಗಾಕಾದ ಶೈಳಮ
ನಿರದಡರ್ದೇಱಿದೊಡೆ ಬೆಚ್ಚಿ ನಡುಕದಿನಾಗಳ್
ತುರಗಾಶ್ರಮನಚ್ಚೈಶ್ರವ
ತುರಗೋಪಮನಿತ್ತುದೊಂದು ತುರಗಮನಿತ್ತಂ

೩೮

ವ॥ ಅಲ್ಲಿ ತುರಗಲಾಭಮವರ್ಗಾತುರ ಕಜ್ಜಮಂ ಬರಿಸೆ ಬೇಗಮೊಯ್ದು ಕರೀಂದ್ರ ಶೈಳಮೆಂಬುದೊಂದು ಪರ್ವತಮೆಂದೊಡೆ ಕುಮಾರಂ

ಕಂ॥ ಕರಿಗಿರಿಶಿಖರಕ್ಕಾಗಳ್
ಹರಿ ಕುಂಭಸ್ಥಳಕೆ ಲಂಘಿಪ ತೆಱ[ನದಾ]ದಂ
ತಿರೆ ಲಂಘಿಸೆ ಭಯದಿಂದಿ
ಕ್ಕರಿಗಿಭಕರಿಯಂ ಕರೀಂದ್ರ ದಾನವನಿತ್ತಂ

೩೯

ವ॥ ಆ ಕರೀಂದ್ರಲಾಭಕ್ಕೆ ವಿಸ್ಮಯಂಬಟ್ಟಂದಮೊಯ್ದೊಂದು ಕೊಳನಂ ಸುಟ್ಟಿ ತೋಱಿ ಬಂದು

ಕಂ॥ ತೊಟ್ಟನೆ ಕೊಳೆ ಪಾಯ್ದೊಡೆ ಬಾ
ಯ್ವಿಟ್ಟು ಜಲಾಸುರನಳುರ್ಕೆ ಕರಂ ಬಾ
ಯ್ವಿಟ್ಟು ನಿಲಲಣ್ಮೆದಾಗಳೆ
ಕೊಟ್ಟಂ ಜನವಿನುತ ಕಾಮಚಕ್ರಮನೊಂದಂ

೪೦

ವ॥ ಆ ಪಡೆಪುಮಂ ಕಂಡು ಬಿಗುರ್ತುಂ ಕುರ್ತಂತೊಂದೆಡೆಗೊಯ್ದು ಸ್ಫಟಿಕ ಶಿಲಾಗ್ರಮನೇಱಿದೊ ಡಪೂರ್ವಲಾಭಮೆನೆ

ಕಂ॥ ಸ್ಫಟಿಕಶಿಲಾಕೂಟಮನತಿ
ಚಟುಳತೆಯಿಂದಡರ್ದೊಡಾ ಗಜಾಸುರನಾಗಳ್

[೧][ಘ][೧] ಟಭೀಷಣೆ [೨][ಯಬಿಸುಟು][೨] ಸಂ
ಕಟದಿಂದಂ ಕಾಮಪಾಶಮಂ ತಂದಿತ್ತಂ

೪೧

ವ॥ ಅದಕ್ಕಮಚ್ಚರಿವಟ್ಟೊಯ್ದೊಂದು ವಿಷಮಪ್ರದೇಶಸ್ಥಿತ ವೃಷಭಾಕಾರದ ದಾನವ್ನಂ ತೋರ್ಪುದುಂ

ಕಂ॥ ಅಸದೃಶಮಾಗಿಯೆ ಕೆಂಗೋ
ಲ್ಮಸಗಿದ ವೃಷಭಂಗೆ ಪೊಕ್ಕಡರಿಭಯದಿಂದಂ
ಬಸದಾಗಿ ಕಾಮಧೇನುವ
[೩][ನೊಸೆದಿತ್ತನಶಂಕಿತಂಗೆ][೩] ವೃಷಭಾಸು [೪][ರನುಂ][೪]

೪೨

ವ॥ ಅಂತಾ ದಾನವನಿತ್ತುದುಮನಾತನ ಪೆತ್ತುದುಮಂ ಕಂಡೊಡಗೊಂಡು ಪೋಗಿ ರಥಾವರ್ತಮೆಂಬುದೀ ಬೆಟ್ಟದಮೇಗೆ ಚೋದ್ಯ ಮುಂಟೆನೆ ಬೇಗಮವನಡರ್ದಾಗಳ್

ಕಂ॥ ಶಕಟಾಕಾರದಿ ಪರಿತರೆ
ಸಕಲುಷದೊಳೇ ಕಳಲ್ದು ಕೆಡೆದತಿಭಯದಿಂದಂ
ಶಕಟಾಸುರಪತಿ ಕೊಟ್ಟಂ
ಮಕರಧ್ವ ಜಸಹಿತಮಪ್ಪ ರಥಮಂ ನುತಮಂ

೪೩

ವ॥ ಕಾಣುತ್ತೆ ಬನ್ನಿಮಿನ್ನಾವುದುಮಸಾಧ್ಯಮಲ್ತೆಂ [೧][ದು][೧] ಬಳಾಹಕಗಿರಿ ಗೊಯ್ದಲ್ಲಿಯೊಂದು ಪುಲಿಯ ಬಿಲಮುಂಟಲ್ಲಿ ಪೊಕ್ಕಡೆ ಫಲಪ್ರಿಯಕ್ಕುಮೆಂದುಗೆಂಟಱೊಳಿರ್ದ ಕುಮಾರನಾ ಬಿಲಮನೆಯ್ದಿದಾಗಳ್

ಕಂ॥ ಮಸಗಿ ಸರಭಸದಿ ಪುಲಿಗ
ರ್ಜಿಸುತಂ ತನ್ನಯ್ದು ಮಱಿಗಳುಂ ಬೆರಸಿ ಕರಂ
ಪಸಿದ ಜವನಂತೆ ಮುಳಿಸಿಂ
ದಸದಳಮಪ್ಪಂತಗುರ್ವಿನೊಳ್ ಪಾಯ್ದಾಗಳ್

೪೪

ಮ॥ ಚಲದಿಂದಾತೆಡಗಯ್ಯೊಳೊತ್ತಿ ಪಿಡಿದಂ ನುರ್ಗಪ್ಪಿನಂ ವ್ಯಾಘ್ರನಂ
ಬಲಗೈಯೊಳ್ ಮಱಿಯಯ್ದುಮಂ ಪಿಡಿದುಕೊಂಡೊತ್ತಿರ್ದ ನಿರ್ದಾಗಳಾ
ಪುಲಿಯುಮ ಭೀಕರರೂಪದಾ ಮಱಿಗಳುಂ ಬೆಂಬಿರ್ದು ಬೇಗಂ ಭಯಾ
ಕುಳದಿಂ ಕಬ್ಬಿನ ಬಿಲ್ಲುಮಯ್ದುವರಲಂಬಾಗಿರ್ದವೇಂ ಚೋದ್ಯಮೋ

೪೫

ವ॥ ಅಂತು ಬಿಲದೊಳ್ ಪುಲಿಯರೂಪಾಗಿರ್ದ ವಿದ್ಯಾದೇವತೆ ಸಾಧ್ಯಮ ದೊಡೆ ಕಬ್ಬಿನ ಬಿಲ್ಲುಮಯ್ದುವರಲಂಬುಮಂ ಪಿಡಿದುಬರ್ಪುದಂ ಕಂಡಣ್ಣಂಗಳ್ ವಿಸ್ಮಯಾ ಕುಳಿತರಾಗಿ ಬನ್ನಿಮಿನ್ನೊಂದಗೋ ಚರಸ್ಥಾನಮುಂಟೆಂದೊಯ್ದು ಜಯಂತಪರ್ವತ ದೊಳಿರ್ದಗಾಧಮಪ್ಪುದಱ

ನಡುವಣ ವೈಜಯಂತಮೆಂಬ ವನಮಂ ತೋಱಿದಾಗಳ್ ಇದು ಪಾದಗಮನಕ್ಕಗೋಚರಮೆಂದಲಂಘ್ಯ ಮಾನಮೆಂಬ ವಿದ್ಯೆಯಿಂ ಲಂಘಿಸಿ ಪೋಗಿ ವನಮಂ ಪೊಕ್ಕು ಮುನ್ನಸಾಧ್ಯಮಾದ ವಿಜಯಶಂಖಮಂ ನೆನೆವುದುಂ ಕೆಯ್ಗೆವಂದೊಡದ ನೊತ್ತಿದೊಡಾ ಧ್ವನಿಗೆ ಬೆರ್ಚಿ ಬೆರ್ಚಿದೊಂಗೆ ಮಾನಸವಾಳಂ ಬೆರ್ಚಿಸಿಮೆಂದಾಱುಂ ಭೂತಂಗಳು ಮುಳಿದು

ಕಂ॥ ಭೀಕರ ರಾಕ್ಷಸ ಭೇತಾ
ಳಾಕಾರದೊಳೆಸಗಿ ಮಸಗಿ ಗರ್ಜಿಸೆ ಕಂಡಿಂ
ತೇ[ಕ] ಲೆವಿರದೇಕೆ ಮಲೆವಿ
[ರೇ]ಕೆ ವಿಗುರ್ವಿಸುವಿರೇಕೆ ಗುರ್ವಿಸುಟ್ಟಿರ್ಪಿರ್

೪೬

ಎಂದೊಡೆ ತೆಗಳೆಂದವುಮೆ
ನ್ದೆಂದೊಡೆ ಕಂಡಾ ಕುಮಾರನೊಂದೊಂದಂ ಮುಳಿ
ದೊಂದೇ ಮೆಯ್ಯೊಳ್ ಕೆಡೆ [ದ
ತ್ತೆಂ] ದೊದಱಿಯುಮೆಂ [ದಳ್ಟಿಯೆ] ಪೆಳ್ಟಿದವಾಗಳ್

೪೭

ವ॥ ಅಂತು ಪೆರ್ಚಿ ಬಂದು ಬೆರ್ಚಿ ಪೋದ ಭೂತಂಗಳಂ ಕಂಡಂಜದಿರಿಮೆಂದವರ ನಾಯಕಿಯಪ್ಪ ಕಾಳರಾಕ್ಷಸಿಯ ಮೆಯ್ಯಂ ಪೆರ್ಚಿಸಿ ಕೋಪೋದ್ಧತೆಯಾಗಿ ಮಸಗಿ

ಮ॥ ನೆಲನಂ ಮುಟ್ಟಿದುದೊಂದು ದಾಡೆ ಪೆಱತೋಂದಾಕಾಶಮಂ ಮುಟ್ಟುತಿ
ರ್ಕಲನಂ ಕೈನಿಮಿರುತ್ತೆರಱದೆಸೆಯುಮಂ ಮುಟ್ಟಿರ್ದುಮುಗ್ರಾಕ್ಷಿನುಂ
ಗಲು ಬಿಟ್ಟಿರ್ದುವು ಪೆರ್ಚಿ ನಾಲಗೆ ಕರಂ ನೀಳ್ದತ್ತುರಂ ಪಾಸಿದಂ
ತೊಲೆದೆಯ್ತಂ [ದ] ಪುದೇಂ ವಿಜ್ರಂಭಣದ ಪಾಂಗತ್ಯುಗ್ರಮಾ ದೈತೆಯಾ

೪೮

ವ॥ ಅಂತದ್ಭುತಮಾಗೆ ಬಂದೀಯೆಡೆಯಂ ಪೊಕ್ಕೆನ್ನ ಕಾಪಿನ ಭೂತಂಗಳ್ ನೋಡಿಸಿ ನಿಶ್ಶಂಕಿತನಾಗಿರ್ದ ನಿವನಕ್ಕುಮಾದಡಮೇನೊಮ್ಮೆ ನುಡಿಯಿಸಿ ಮನದ ಪೆಂಪ ನೋಱ್ಪನೆಂದಿಂಃತೆಂದಳ್

ಕಂ॥ ಪಾಱುವಡಂ ಪರಿವಡಮಣ್
ವತಿಂ ಪೋಗ [ಲ್ಕಮಾ]ವ ದೆಸೆ [ಯಿಲ್ಲ] ಳಿಪಿಂ
ತೋಱದಿರು ಜೋವೆಱ
ದಿರಾಂ ಮುಳಿಎತೆಮಪೂಸಲ್ನೆಱಯೆ (?)

೪೯

ವ॥ ಎನೆ ಕುಮಾರನೀಕೆ ಮುನಿದೊಡೆ ಮುನಿವೆಂ ನುಡಿವಡೆ ಮಱುಮಾತೀವೆ ನೆಂದಿತೆಂದಂ

ಕಂ॥ ವಸುಧೆಯ ನಭಾದೆಡೆಯುಮನಿ
ರ್ದೆಸೆಯುಮನೆ+ಱಯಲ್ಕೆ ನಿಮಿರ್ದೆಯೆಂದಾಂ ಬಗೆದೆಂ

ಮಸಗಿ ನಿಮಿರ್ದೊಡಲಗುರ್ವಂ
ಜಿಸುಗುಂ ಬಂದಿವನನೆಂಬುಡಃಂ ನೀಂ ಬಗೆದೋ

೫೦

ವ॥ ಎಂಬಭಷೆಯುಂ ತೆಗಟುಮಂ ಮನದ ಪೆಂಪುಮನಱಿದು ಮತ್ತೆಯುಂ ಮುಳಿದಾಲಿಯಂ ತಿರಿಪಿದಾಗಳ್ ಬಂಡಿಯ ಗಾಲಿಯ ತಿಱಿಯದೊಡಂ ನಿನ್ನಾಲಿಯ ತಿಱಿಯದೊಡಂ ನಿನ್ನ ನಚ್ಚುವ ಮರದ ಚಂಡಿಯಚ್ಚು ಮುಱಿಯದಿರದೆಂದೊಡವಕ್ಕಂ ಕಿನಿಸಿ ಮತ್ತೆ ನೀಮಿರಲ್ ಬಗೆದಾಗಳಿನ್ನಿರಲಾಗೆಂದು ಕಬ್ಬಿನ ಬಿಲ್ಲೊಳ[ಲ]ರಂಬಂ ತೊಟ್ಟು ತೆಗೆನೆಱಿದೆಚ್ಚೊಡಿನಿಸು ನಡುಕಮನಱಿದಯ್ದಂಬಿನೊಳಮೆಚ್ಚೊಡೆ ಬಟಿಲ್ವ ಕೆಯ್ತ ಮನಱಿದು ಕಬ್ಬಿನ ಬಿಲ್ಲೊಳೆತ್ತಿಪೊಯ್ದಾಗಳ್ ಕಾಳರಾಕ್ಷಸಿ ತೋಟ್ಟನೆ

ಕಂ॥ ಮೂಱುಂ ಲೋಕದೊಳೀ ಕ್ರಿಯೆ
ತೋಱುವೊಡಂ ಪೆಱ [ತದಲ್ಲಿ ತೋಱಿಲ್ಕಕ್ಕುಂ]
ಮೂಱುಂ ಲೋಕಮುಮಲ್ಲದೆ
ಬೇಱುಳ್ಳಡಮದಱೊಳೆನ್ನರಿನ್ನ [ರು]ಮೊಳರೇ

೫೧

ಎ॥ ಎಂಬಂತಪ್ಪ ರೂಪುಂ ಜವ್ವನದಳುರ್ಕೆಯುಂ ಗಾಡಿಯುಂ ನೆಲೆಯುಂ ಬಣ್ಣಮುಂ ತನಗಿಟ್ಟಳ್ಮೊಪ್ಪೆ ನಾಣನೊಳಕೆಯ್ದು ಕನ್ನೆಯಾಗಿರ್ದಾಗಳೊದಱಿದಾಱುಂ ಭೂತಂಗಳುಂ ವಸಂತ ನಿದಾಘ ವರ್ಷ ಶರತ್ ಹೇಮಂತ ಶಿಶಿರಂಗಳ್\ಎಂಬಾಱುಂ [ಋ]ತು ಗಳೆದೀ ದೈವರೂಪದಿಂ ಬಂದು ವಸಂತರಿತುವಿನರೂಪಿನಾತಂ ಕುಮಾರನಿದಿಱೊಳ್ ನಿಂದು ಕೇಳಿಕೆ ರತಿಯೆಂಬೊಳಾ ಕನ್ನೆಯನಿಂತಗೋಚರಮಪ್ಪೆಡೆಯೊಳ್ ಇಂತಪ್ಪಕಾಪಿ ನೊಳಿಂತಪ್ಪ ರೌದ್ರರೂಪಿನೊಳಿರ್ದೊ ಡಾವನೊರ್ವನಳ್ಕದೆ ಸಾಧಿಸಿದೊಂಗೀಕೆ ಪೆಂಡತಿಯಕ್ಕುಮೆಂಬಾದೇಶಂ ಕಾರಣಮಾಗಿಲ್ಲಿ ಕಾಳ್ರಾಕ್ಷಸಿ ನಾಡೆ ನಾಮುಂ ಭೂತಂಗಳಾಗಿ ಕಾದಿರ್ದೆವೆಮ್ಮುಮನೀಕೆಯಮಂ ಕೈಕೊಳ್ಳೆಂದೊಡಂತೆಗೆಯ್ವೆಂ ಕೈಕೊಂಡೆನೆನ್ನ ಬರಿಸಿದಾಗಳ್ ಬನ್ನಿಮೆಂದು ತನ್ನ ಪಡೆದ ವಸ್ತುಗಳುಮನಾಕೆಯ ಪಕ್ಕದಿರಿಸಿ ಮಹುಟ್ಟಿ ಬಂದಣ್ಣಂಗಳೊಳ್ ಕೂಡಿದಾಗಳೆಲ್ಲಿಗೊಯ್ದೊಡಮಿತ್ತಂಗಸಾಧ್ಯ ಮೆಂಬುದೊಲ್ಲೆಂದು ಪೊ[ಟ] ಲ್ಗಒಡಗೊಂಡು ಪೋಗಿ ಪೊಕ್ಕೆಂದಿನಂತೆ ಸುಖದಿನಿರ್ದು

ಉ॥ ಬಾಗಿಯ ಪೂವಿನೊಳ್ ನಯದಿನಿಟ್ಟಡೆ ಪುಣ್ಯವಿಹೀನಕಾಲದಂ
ದಾಗಳೆ ಸಯೆ ಕಂಡುಮುಮರೇಂದ್ರನೆ ಕೋಪದೊಳಿಟ್ಟ ವಜ್ರಮಾ
ಬಾಗೆಯ ಪೂವಿನಂದದೊಳೆ ಮುಟ್ಟುಗುಮುನ್ನತ ಪುಣ್ಯಮುಳ್ಳೊಡಿಂ
ತಾಗದುಮೆಲ್ಲಿಯುಂ ವಿಪುಳಪ್ಪಣ್ಯರನೇಂ ಗೆಲಲಾರ್ಗಮಕ್ಕುಮೇ

೫೨

ವ॥ ಅಂತು ಪುಣ್ಯೋದಯದೊಳ್ ಪ್ರದ್ಯುಮ್ನ ಕುಮಾರಂಗೆ ಸಕಳವಿದ್ಯಾ ಸಂಗೋಗಮುಂ ಜನಾನುರಾಗಮುವಾಗಿ ರೂಪಿನ ಪೊಗರ್ತೆಯುಂ ಸಹಜ್ದ ನೆಗರ್ತೆಯುಮಂ ಕೇಳ್ದು ಕಂಡ ದಂಡಮಾ ಗಂಡವೇಟಂಗೊಂಡರ್ ಪೆಂಡಿರಾತನ ಕಾಣ್ಬಲ್ಲಿ ಸುಳಿವುದುಂ ಕಾಣದಲ್ಲಿ ನಾಣದಲ್ಲಿ ನಾಣಳಿವುದುಮಾಗೆ ಕೆಲರಾತಂ ಮನಮಂ ನೋಯಿಸುವನೆಂದು ಮನುಮಥನೆಂದರ್ ಕೆಲರ್

ಮೆಚ್ಚಿಂಗೀತನೆ ದೇವನೆಂದು ಕಾಮ ದೇವನೆಂದರ್ ಕೆಲರ್ ಮದಮಂ ಪೆರ್ಚಿಸುವನೆಂದು ಮದನನೆಂಬರ್ ಕೆಲರಾತನಿಂ ಕಾಮದರ್ಪಮಪ್ಪುದಱಿಂ ಕಂದರ್ಪನೆಂಬರ್ ಕೆಲರಾತಂ ತಮ್ಮ ಮನದೊಳ್ ಪುಟ್ಟುವು ದಱಿಂ ಮನಸಿಜನೆಂಬರ್ ಕೆಲರಾತನನಾಗಳುಂ ನೆನೆವುದಪ್ಪುದಱಿಂ ಸ್ಮರನೆಂಬರ್ ಕೆಲರಾತಂ ತಂತಮ್ಮ ಕಣ್ಣೊಳ್ ತೊಱಲ್ವನಾಗಿಯುಮಿದಿರೊಳ್ ಕಾಣದೊಡನಂಗನೆಂಬರ್ ಕೆಲರಾತಂ ತಮ್ಮನೊಂಬತ್ತನೆಯ ವೇಗಮನೆಯ್ದಿ ಸುವನೆಂದು ಮಾರನೆಂಬರ್ ಕೆಲರಾತ ನೆಲ್ಲರ ಮೆಯ್ಯೊಳಿಪ್ಪು ದಱಿಂದಗಜನೆಂಬರ್ ಕೆಲರಾತಂ ಕಬ್ಬಿನ ಬಿಲ್ಲುಮರಲಂಬು ಮುಳ್ಳುದಱಿಂ ಕುಸುಮಶರನುಮಿಕ್ಷುಚಾಪನುಮೆಂದರ್ ಕೆಲರ್ ಮಕರ ಪತಾಕೆಯಿಂದಂ ಮಕರಧ್ವಜನೆಂದರ್ ಮತ್ತಮಿಂತೆನಿತಾನುಂ ಪೆಸರನಿಟ್ಟು ಬಾಯಂಬಿಟ್ಟು ಕರೆದು ಭ್ರಾಂತುಗೊಳ್ವು ದುಮಂ ಕೂಡಲ್ಪಡೆಯದೆ ವಿರಹದೊಳ್ ಪೊರಳ್ವುದುಮನಾತನ ತಾಯ್ ಕನಕಮಾಲೆ ಕೇಳ್ದು ಕಂಡು

ಉ॥ ದಿಟ್ಟಿ ತೊಡಂಡಕೆ ರೂಪಿನ ಬೆಡಂಗಿನೊಳೊಪ್ಪುವ ರೂಪು ಚಿತ್ತದೊಳ್
ಪುಟ್ಟಿಸಿ ಸೋಲಮಂ ಕರಮೆ ಸೋಲ್ತ ಮನಂ ಕಡುರಾಗದಿಂದಲಂ
ಪಿಟ್ಟಳಮಪ್ಪ ಕೂಟಮನೆ ಚಿಂತಿಸಿ ಕೂಟದ ಚಿತೆ ನೋವುದಂ
ತೊಟ್ಟನೆ ಮಾಡೆ ನೋವು ಮದನಜ್ವರಮಂ ಪಡೆದಟ್ಟು ಕಾಂತೆಯೊಳ್

೫೩

ಕಂ॥ ಆವಂಗೆ ಸೋಲ್ತಳಾತನೆ
ಪೂವಿನ ಸರದಿಂದಮೆಸುವೊನೆಂದೊಡೆ ಬೇಟ
ಕ್ಕಾವುದೊ ಸೆರಗಾವುದೊ ಬೆಱ
ಗಾವುದೊ ತಣ್ಪಾವುದಾಸೆಯಾವುದೊ ಪೆಱತೇಂ

೫೪

ಉ॥ ನೋಯಿಸಿ ಕುಂದದೆನ್ನೆರ್ದೆಯೊಳಂಗಜನಿರ್ದಪನೆನ್ನ ಚಿತ್ತಮಂ
ನೋಯಿಸೆ ಕಣ್ಗಳೊಳ್ ತೊಱಲುತಿರ್ದಪನಂಗಜನ್ಯೆದುಮಂಬಿನೊಳ್
ನೋಯಿಸುತಿರ್ಪನುಂ ಬಗೆವೊಡಂಗಜನೋವಿದುವೇ ವಿಗುರ್ವಣೋ
ಪಾಯದಿನೆನ್ನೊಳಪ್ಪ ಪಗೆಯಿಂದವನೊರ್ವನೆ ಕಾಮರಾಜನೋ

೫೫

ಕಂ॥ ಎನ್ನೆರ್ದೆಯೊಳಿಪ್ಪನುಂ ತಾ
ನೆನ್ನೆರ್ದೆಯನೆ ಚಲದಿನೆಸುವನುಂ ತಾನೆಂತಂ
ತನ್ನಂ ಬಂಚಿಸಿ ನನೆಯಂ
ಬೆನ್ನೆರ್ದೆಯನೆ ಕೊಳ್ವುವಿಂತು ಬಲ್ಲರುಮೊಳರೇ

೫೬

ವ॥ ಎಂದೆಂತಿನಿತಾನುಂ ತೆಱದಿಂ ಪಂಬಲಿಸಿ ಪಲುಂಬುತುಂ ತಾನಾತಂಗೆ ತಾಯೆಂ ಬುದಂ ಬಗೆದಳಿಲ್ಲ ಮಱಿಗೆ ತಾಯೆಂಬುದಂ ಬಗೆದಳ್ ಮೊಲೆಯೂಡಿದುದಂ ಬಗೆದಳ್ವೊಲೆಯೂಡಿದುದಂ ಬಗೆದಲಿಲ್ಲ ಮನಮಳಾಡಿದುದನೆ ಬಗೆದಳ ಪಾಪಮಂ ಬಗೆದಳಿಲ್ಲ ಪರಿತಾಪಮನೆ ಬಗೆದಳ್

ಕುಲಮಂ ಬಗೆದಳಿಲ್ಲ ಮೊಲೆಯೂಡಿದುದಂ ಬಗೆದಳಿಲ್ಲ ಮನಮಳ್ಳಾಡಿದುದನೆ ಬಗೆದಳ್ ಎತ್ತಿದುದಂ ಬಗೆದಳಿಲ್ಲ ಮನಮೆತ್ತಿದುದನೆ ಬಗೆದಳ್ ಪಾಪಮಂ ಬಗೆದಳಿಲ್ಲ ಪರಿತಾಪಮನೆ ಬಗೆದಳ್ ಕುಲಮಂ ಬಗೆದಳಿಲ್ಲ ತನ್ನೊಂದೊಲವನೆ ಬಗೆದಳ್ ಮಗನೊಳಗಾಗದೆಂಬುದಂ ಬಗೆದಳಿಲ್ಲ ವಿರಹಂ ನೀಗದೆಂಬುದನೆ ಬಗೆದಳು ವೊಳ್ಪಾವುದುಮಂ ಬಗೆಯದೆ ಕಾಂಚನಮಾಲೆ

ಕಂ॥ ಸ್ಮರಹತ ಪರಿತೋಷದೆ[ಯತಿ]
ಭಾರದಿಂದ[ಮವಳ] ಟಿಲುಣ್ಮೆ ಪೊ [ಣ್ಮರೆ ಮೇಣಾ]
ವಿರಹಜ್ವರ[ಮುಂ ಪೆರ್ಚಿರೆ]
ಮರಸಿಗೆ [ಯುಂ]ಪುಟ್ಟಿತೆಂಬುದು ಪ್ರಬಳಿಸಿದರ್

೫೭

ವ॥ ಆರುಂ ದಾಹಜ್ವರಕ್ಕೆಂದು ಶೀತಳಕ್ರಿಯೆಯಂ ಮಾಡಿಯುಂ ಸೈರಿಸದೆ ನಂದನ ವನಮಂ ಪೊಕ್ಕೊಡಾತನಂ ಪಿತೃವನದಂತೆ ಭಯಮಂ ಮಾಡೆ ಬೆಚ್ಚಿ ಕೊಳನಂ ಪೊಕ್ಕೊಡಾ ಕೊಳಂ ಕೊಳ್ಗುಳದಂತೆ ಸಾವಂ ಮಾಡಿದೊಡಲ್ಲಿಂದು ಪೊಱಮಟ್ಟು ತಳಿರಂ ಪಾಸಿದೊಡಾ ತಱಗೆಲೆಯಂ ಪಾಸಿದಂತಾದುವು ಬೀಸುವ ಜಳವೆ ಕಾಮನೆ ಕೈವೀಸು ವಂತಾದುವು ಪೂಸುವ ಚಂದನಂ ಪುಣ್ಣೊಳ್ ಪೂಸುವ ಸಾಸುವೆಯಂತಾಗೆ ತಳಿವಾಲಿ ನೀರ್ಗಳುಂ ಕಣ್ಣಾಲಿನೀರಂತೆ ಬೆಸುಪೇಱ ಬೀಸಿದಾಗೆ ಪರಿಚಾರಗಣಂ ರಾಕ್ಷಸಗಣದಂತೆಡೆ ಮಗುಟ್ದು ಬಂದು ತನ್ನ ಮಾಡದ ನೆಲೆಯೊಳ್ ಪೊರಳುತ್ತಿ[ರ್ದ]ವನೊಳಿಂತೆಂದು ಬಗೆಗುಂ

ಉ॥ ಆನೆರೆದಟ್ಟಿದಾಗಳಿದು ಪಿತ್ತವಿಕಾರದಿನಾದುದೆಂಗುಮೋ
ತಾನೆನಗಬ್ಬೆಯೆಂದು ಪುಸಿ ಶೌಚದೊಳಿನ್ನಣಮಾಗದೆಂಗುಮೋ
ಜೈನಮತಶ್ರುತಂಗೆ ಪರನಾರಿಯೊಳಾಗದು ಕೂಟಮೆಂಗುಮೋ
ಮಾನಿತಮಪ್ಪ ವಸ್ತುಗಳನಿತ್ತಡೆ ಮೋಹದಿನಕ್ಕುಮೆಂಗುಮೋ

೫೮

ವ॥ ಎಂದು ಬಗೆಬಗೆದು ಪಲುಂಬುತ್ತಿರ್ಪಿನಮಬ್ಬೆಗೆ ದಾಹಜ್ವರಮಾದುದೆಂಬುದಂ ಕಾಮದೇವಂ ಕೇಳ್ದಾದರಯ್ಯಲೆಂದು ಬಂದಾಗಳ್ ಮುನ್ನ ನಡುಕಂ ಪೊಣ್ಮೆ ಬೆಮರುಣ್ಮೆ ಕಿಱುದುಬೇಗದಿನೆಂತಾನುಂ ಬರೆಯಿತ್ತಬಾಯೆಂದು ಸಾರೆ ಕುಳ್ಳಿರಿಸಿ ತೋಱು ಕೆಯ್ಯನೆಂದಾತನ ಕೆಯ್ಯಂ ತನ್ನೆರ್ದೆಯೊಳ್ ಸಾರ್ಚಿ ನಡುಕಮಂ ತೋಱ ಬೆಂಕೆಯಂ ನೋಡೆಂದು ಕೆಯ್ಯಂ ಮೊಲೆಯಮೇಗಿಟ್ಟು ಪಿಡಿದಿರ್ದು ಕೆಲದೊಳಿರ್ದವರಂ ಕೇಳದಿಂತೆಂಗುಂ

ಕಂ॥ ಇಂತೆನಗೊದವಿದುದಸು ಪೋ
ಪಂತಪ್ಪನಿತೊಂದವಸ್ಥೆ ಪೆಱಿಂತೊಂದಿದು ತಾ
ನೆಂತುಂ ಕಿಡದಗಜನಿಂ
ಭ್ರಾಂತಿಸದೆನ್ನೊಡನೆ ಕೂಡಿಬಾಱಿಸು ಪೆಱದೇಂ

೫೯

ವ॥ ಎನೆ ತಒಟ್ಟನೆ ಬೇಳ್ಕುತ್ತ ಬೆಟ್ಟನೆವೋಗಿ ತನ್ನ ಕೆಯ್ಯಂ ಬೇಗಮುಡಿಗಿ ಕೊಂಡು ಇದು ನಿಮಗೆನಿತು ಪೈತ್ತಿಕಜ್ವರಮಾದೊಡಮಿಂತೆನಲಕ್ಕುಮೆ

ಕಂ॥ ಎನೆ ಕನಕಮಾಲೆ ನುಡಿಗಂ
ಮನಸಿಜ ಕೇಳ್ ಖದಿರವನದ ತಸ್ಕರಶಿಲೆ ತಾಯ್
ನಿನ[೧][ಗಾನಲ್ಲೆಂ][೧]ನಿನ್ನಂ
ಜನಪತಿ ಕಂಡೆನಗೆ ತಂದು ನಡಪೆಂದಿತ್ತಂ ೬೦

ಉ॥ ಇತ್ತಡೆ ನಿನ್ನಾನಾಂ ನಡಪಿದೆಂ ಮೊಲೆಯಾಗದುದೆಲ್ಲಿವಂದುದೋ
ಚಿತ್ತಜ್ ನಿನ್ನನೊಲ್ದು ಮೊಱೆಯಿಟ್ಟಪೆ ನೀನೆನಗಕ್ಕಾಱಟೆಂಬುದಾ
ಪತ್ರಿನೊಳಪ್ಪಡಂ ಫಲಮನುಣ್ಣದೆ ಸಾವರೆ ಪಂಚವಳ್ಳಿಯಂ
ಪಿತ್ರಿಲೊಳಿಟ್ಟರುಂ ಮರನನಿಟ್ಟರುಮೇಂ ಫಲಮುಂಬರಲ್ಲರೋ ೬೧

ಅಂತೇಕೆಂಬಿರ್ ನವಮಾ
ಸಾಂತಂಬರ ಪೊ[೨][ತ್ತು][೨]ಪೆತ್ತ ತಾಯ್ವಿರ್ಗಿನ್ನೆಂ
ದಿಂತಿನಿತು ಕಾಲಮೆಲ್ಲಂ
ಸಂತಸದಿಂ ನಡ [೩][ಪೆ][೩] ನಿಮ್ಮೊಳುಱದ [೪][ರ್][೪] ಸಮನೇ ೬೨

ಚಂ॥ ನಡಪಿದೆನರ್ತಿಯಿಂ ಫಲಮನುಂಬನಿತಾಗಲೆವೇಟ್ಟುಮೆಂಬಿರ
ಪ್ಪಡೆ ಬೆಸವೇಟಿಯಾಂತ ರಿಪುವಂ ಗೆಲೆ ಕಾ [೫][ದು][೫] ವೆನಂತುಮಲ್ಲದೀ
ಯೆಡೆಯೊಳ ಮಾಲ್ಯ ವಸ್ತುವೊಳವೆನ್ನಿರೆ ತಂದವನೀವೆನೆಲ್ಲಿಯಾ
ದೊಡಮೆನೆ ಗರ್ವಮಾದವರ್ಗೆ ಲೋಕದೊಳೇನರಿದೇನೊ ಗೋಚರಂ ೬೩

ವ॥ ಎಂಬುದೇಲ್ಲಮಂ ಕೇಳ್ದು ಬೆಚ್ಚನೆ ಸುಯ್ದು ಮನದೊಳಿಂತೆಂಗುಮಿವಂಗೆತಾಯೆಂಬತ್ತಂ ಪೋಗದೇಗೆಯ್ವೆಂ ಮೋಹಮಂ ತೋಱಿ ನಡೆವೆನೆಂದೆಂಗುಂ ನೀನೆನಗೆ ಬೆಸಕೆಯ್ದುದಂ ಕಂಡು ನಂಬುವುದಂತಪ್ಪಂದು ಕೆಯ್ಕೊಳೆನ್ನನೊಳಕೊಂಡು ವಿದ್ಯಾಧರ ಶ್ರೀಯನಾವಗಂ ಕೆಯ್ಕೊಂಡು ಸುಖಮಿಪ್ಪುದಂಬಗೆದುದನಲ್ಲದೀಗಳಿನಳಿಪನೆ ಬಗೆದೆನಲ್ಲೆನೆನೆ ಕಾಮಂ ವಿದ್ಯಾಲಾಭಮುಮರ್ಥಲಾಭಮುಮಿನಿಸು ದೋಷಂಬೆರಸಿಯಲ್ಲದಾಗವೆನ್ನ ಬಗೆಯೆ ಬಗೆಯಾಗಿ ವಿದ್ಯೆಯಂ ಕೊಳ್ವೆನೆಂದಿಂತೆಂದಂ

ಕಂ॥ ಉ[ಂ]ತುಂ ಬೆಸಕೆಯ್ವೆಮನಿಮ
ಗೆಂತು ಭರಂಗೆಯ್ಯೆ ಕೂರ್ಮೆಯುಂ ಕಜ್ಜಮುಮಂ
ಭ್ರಾಂತಿಸವೇಡೆನಲ್ಲೀವುದು
[ಮಂ]ತೋಱಿದೊ[೬][ಡೆಂ][೬]ತು ದಾಂಟುವೆನೊ ಬೆಸಸಿಮದಂ ೬೪

ವ॥ ಎನ್ನ ನೀಹಕ್ಕಡಂಬಂದಂ ತನ್ನ ಮೋಹಕ್ಕೆ ಮನಂದಂದನೆಂದು ನಂಬಿ ಪ್ರಜ್ಞಪ್ತಿವಿದ್ಯೆಯಂ ತ್ರಿಶುದ್ಧಿಯಿನಿತ್ತೆಂ ಸಂಜಯಂತಭಟ್ಟಾರರ್ ಮೋಕ್ಷಮೋದಲ್ಲಿಯ ಸಿದ್ಧಕೂಟದ ಬೈತ್ಯಾಲಯದೊಳ್ ನೀಂ ಸಾಧಿಸಿಕೊಳ್ಳೆಂದು ಮಂತ್ರಪದಂಗಳಂ ಪೇೞ್ದೊಪ್ಪಿಸಿದೊಡೆ ಕೆಯ್ಕೊಂಡು ಪೊಱಮಟ್ಟು ಬಂದರ್ಚನಾಸಹಿತಂ ಪೋಗಿ ಸಿದ್ಧ ಕೂಟಮಂ ಬಲಗೊಂಡು ದೇವರಂ ಬಂದಿಸಿ ಮಂತ್ರವಿಧಿಯಿಂದಾರಾಧನೆಗೆಯ್ಯೆ ವಿದ್ಯೆ ಸಾಧ್ಯಮಾಗಿ ಬೆಸನೇನೆಂದೊಡದಂ ಪೂಜಿಸಿರ್ಪಿನಮಲ್ಲಿಗೆ

ಕಂ॥ ಯಮನಿಯಮ ಸ್ವಾಧ್ಯಾಯ
ಕ್ರಮಾಯುತರಹಿತತ ವಿಶ್ರುತ ವಿಪುಳೋತ್ತಮರ್ ಗು (?)
ಣಮಣಿಗಳುಂ ಗುಣಭೂಷಣ
ವಿಮಳಮತಿಗಳೆಂಬ ಚಾರಣ[ರ್]ಋಷಿ [೧][ಯುಗಳರ್][೧]

೬೫

ವ॥ ಇರ್ವರ್ವಂದೊಡವರಂ ಬಂದಿಸಿ ಮುಂದೆ ಕುಳ್ಳಿರ್ದು ಧರ್ಮಮಂ ಕೇಳ್ದಿಂ ಬೞಿಯಂ ವಿದ್ಯೆಯಂ ಕಾಳಸಂಬರಕುಲದ ಗಂಡರ್ಫೆ ಬೆಸಕೆಯ್ಯದ ಕಾರಣಮಂ ಬೆಸಗೊಂಡು ತಿಳಿದು ಭಾಟ್ಟಾರರಂ ಬಾಂದಿಸಿ ಮಗುಟ್ದು ಬಂದು ತನ್ನೆಂದಿನಿರ್ಪಂತೆ ಕಾಮದೇವನಿರೆ

*ಕಂ॥ ವಿದೆ [೨][ಯುಮಂ][೨]ಸಾಧಿಸಿ ಬಂ]
ದಿರ್ದ[೩][ನದಂ][೩] ಕೇಳ್ದು ಕನಕಮಾಲೆ [೪][ಯುಮಂತಿ
ರ್ದುದ][೪] ನಂಬಿ[ಯೆ]ವಿದ್ಯೆಯನೊಸೆ
[೫][ದಿರ್ದಿ][೫]ತ್ತೆಂ ಕೊಂಡುಮಿಂತು ಪುಸಿವುದನಱಿಯೆಂ

೬೬

ವ॥ ಎನೆ ಕಾಮದೇವನಿಂತೆಂದು

ಕಂ॥ ಪುಸಿಯಲಣಮಾಗ ರಣದೊಳ್
ಕುಸಿಯಲುಮಣಮಾಗದಬ್ಬ[ನೀಂ] ಮುನ್ನೆಂದೆಂ
ಬೆಸಕೆಯ್ದೆನೆಂದೆನಿನ್ನುಂ
ಬೆಸಸಿರೆ ತಕ್ಕೊಂದು ಬೆಸನನರ್ಥಿಯೆ ಗೆಯ್ವೆಂ

೬೭

ವ॥ ಎಂಬದಂ ಕೇಳ್ದು ಮದನಾಗ್ನಿಜ್ಜ್ವಮೊಂದಾಗೆ ತಳ್ತುರಿದೊಡೆರ್ದು ಕುಳ್ಳಿರ್ದಿಂ ತೆಂದಳ್

ಕಂ॥ ತಕ್ಕನತೆಱದಿಂ ನೀನುಱಿ
ದುಕ್ಕಲಿಸಿದೆಯಕ್ಕುಮಾದೊಡೆ[ರದಿ]ನ್ನುಂ [ನೀಂ]
ಪೊಕ್ಕಿರ್ದಮರೇಂದ್ರನ ಮಱಿ
ೞಒಕ್ಕಡಮಾಂ ಕೊಲಿಪೆನೆನ್ನ ಮುಳಿಸನೆ ಸಲಿಪೆಂ

೬೮

ವ॥ ಎಂತು ಬರ್ದುಂಕುವೆಯೆನೆ ಮನಸಿಜ್ನಿಂತೆಂದಂ

ಕಂ॥ ನಿಮ್ಮಮಗನೆಂದು ಬರ್ದುಕುವೆ
ನುಮ್ಮಡಿಸೆ [೧][ನ][೧] ದೆಂತುಮಬ್ಬ ಕೊಂದಡೆ ಪಾಪಂ

ನಿಮ್ಮನೆ ಸಾರ್ಗುಂ ತಾಯ್ ಮುಳಿ
ಿ[ಸಿಮ್ಮ]ಿಗನಂ ಕೊಂದಳೆಂಬುದೆಲ್ಲಿಯುಮುಂಟೇ

೬೯

ವ॥ ಆವುದುಮಂ ನೀಮಱಿವಿರೆನಗೆ ಪಾಪಂ ಮೆಯ್ವೆತ್ತಡೊಳ್ಕಿತ್ತೆಂದೆರ್ದು ಪೋದಂ ಪೋದಾಗಳೆ ಕನಕಮಾಲೆ ತನ್ನ ಿಯ್ಯಂ ಕಿಡಿಸುವಂತಎ ಮೆಯ್ಯ[ಂ] ಕಿಡಿಸಿ ಕೃತಕಭಾವಮಂ ತನ್ನೊಳುಮೊಡಂಬಡಿಸಿ ಖಿನ್ನನಾಗಿರ್ದಳಿರ್ಪಿನಂ ಕಾಳಸಂಬರಂ ಬಂದಿ ತೇಕೆಯಿರ್ದೆಯೆನೆ ಶೋಕರಸಮಂ ಭಾವಿಸಿ ಮೆಯ್ಯನಿಕ್ಕಿ ಕಣ್ಣನೀರಂ ನೆಗಪಿ ನೊಂದ ಮೆಯ್ಯಂ ತೋಱಿ ಬಿಡದಿಂತುಮೊಳ ಿ[ಱು]ಿತ್ರಮಿಂತೆಂಗುಂ

ಕಂ॥ ಆರ ಮಗನೆಂದು ಿ[ಮ]ಿ ಱಿಯದೆ
ಧೀರಾ ನೀನೀಯೆ ಕೊಂಡು ನಡಪಿದೆನೆನ್ನಂ
ಕ್ರೂರಸುತವೇಷ ದುರ್ವಾ
ಚಾರಂ ಮೇಲ್ವಾಯ್ದನಿಂತಧೋಗತಿಗೊಯ್ದಂ

೭೦

ವ॥ ಎಂದು ಮತ್ತಮೆನಿತಾನುಮಿಟ್ಟಳಂಗಳುಮಂ ಪುಸಿಯ ಪೊಟ್ಟಣಂಗಳುಮಂ ನುಡಿಯೆ

ಕಂ॥ ಅಂಬರಚರಪತಿ ಬೇಗಂ
ನಂಬಿದನಂಗನೆಯ ನುಡಿಯನೆಂತಪ್ಪವರುಂ
ನಂಬುವರಿವರಿಂ ಮದಮಂ
ತುಂಬುವರಿವು ಚೋದ್ಯವಲ್ಲವೆಂದಂ ಜಗದೊಳ್

೭೧

ವ॥ ಪೆಂಡತಿಯ ಮಾತನಂತು ನಂಬಿ ಕಾಳಸಂಬರಂ ಮುಳಿದೀಗಳೆ ಕೊಲ್ವೆನಂದು ಪೊಱಮಟ್ಟಿಂತೆ ಬಂದು ಮಸಗಿ ತನ್ನಯ್ವದಿಂಬರುಮಂ ಪೇೞ್ದೊಡಂತೆಯಾಂಡು ವಂಗೆಱಿಯಪನಾದಂತೆ ಸನ್ನರ್ದರಾಗಿ ಕಾಮದೇವನಿರ್ದೆಡೆಗೆ ನಡುಗುತಂ ವಿದ್ಯುದ್ದಾಡ ನಿಂತು ಕೊಲಲಾಗಮುಪಾಯದಿಂ ಕೊಲ್ವಮೆಂದು ಪೊೞಲ ಪೊಱಗೊಂದಡವಿಗೊಯ್ದು ವಿದ್ಯೆಯಿಂದೊಂದು ಅಗಾ[ಧ]ಮಪ್ಪ ಲೂಪಮಂ ಸಮೆದಲ್ಲಿ ಪೊಕ್ಕೊಡತಿಶಯ ವಸ್ತು ಸಮನಿಸುಗುಮೆನೆ ಕೃತಕಮೆಂದಱಿದು ಕಾಮದೇವಂ ತನ್ನಂದದೊಳೊಂದು ವಿದ್ಯೆಯನಲ್ಲಿ ಪುಗಿಸಿ ಬೇಗಮದೃಶ್ಯನಾಗಿ ನೋಡುತ್ತಿರ್ದನವರೆಲ್ಲಮಿವನನೀಗಳೆ ಪೂೞ್ದು ಕೊಲ್ವಮೆಂದು

ಮ॥ ಮರನುಂ ಕಲ್ಲುಮನೊಟ್ಟಿದಂದು ಪಲವುಂ ಸೂೞಿಲ್ಲಮಾ ಕುಯ್ಯಲಂ
ಭರದಿಂ ಪೂೞ್ವಿನಮೊಟ್ಟುತಿರ್ಪುದನನಂಗಂ ಕಂಡು ಪೋತಪ್ಪುದಾ
ದೊರೆಯಾಯ್ತಬ್ಬೆಯ ಚಿತ್ತವೃತ್ತಿಯೊಳಹಂ ವಿದ್ವೇಷಮಂ ನೆಟ್ಟು ನೀ
ದೊರೆಯಾಯ್ತೆನ್ನಯ ಸೋದರಂಗಳು ಕರಂ ಕೂರ್ತಂದಮೇಮ ಚೋದ್ಯಮೋ ೭೨

ವ॥ ಎನುತೆ ನಿಜರೂಪದೊಳ್ ಬಂದೊದಱಿ ಪೊಕ್ಕಿವರೆನ್ನನೆಂತು ಕೊಲ್ವಡ ಮಾನಿವರ್ಮ್ ಕೊಲ್ವೆನೆಂದನಿಬರುಮಂ ನಾಗಪಾಶದಿಂ ಪಿಡಿದುಡಿಯೆ ಕಟ್ಟಿಕ್ಕಿ ಪೋನಿಮ್ಮರಸಂಗೆ ಪೇೞಿಂದೊರ್ವನನಟ್ಟಿದೊಡವಂ

ಕಂ॥ ಪೊಡವಿಪನನೆಯ್ದಿ ಬೇಗಂ
ನುಡಿಗುಂ ನಿಮ್ಮ ವದಿಂಬರುಂ ಸುತರನಡು
ರ್ತೊಡನಡಸಿ ಪಿಡಿಶು ದರ್ಪಂ
ಗಿಡೆ ಕೋಡಗಗಟ್ಟುಗಟ್ಟಿದಂ ಕುಸುಮಶರಂ

೭೩

ವ॥ ಎನೆ ಮತ್ತಂ ಮುಳಿದು ಸರ್ವಸನ್ನಣಂಗೆಯ್ದು ಚಾತುರ್ದಂತಬಲಂಬೆರಸು ಪಱಯಂ ಪೊಯಿಸಿ ಪೊತಮಟ್ಟು ಬಂದಂದು ಕಾಮದೇವನಿರ್ದೆಡೆಯನೆಯ್ದಿದಾಗಳಾ ಪಡೆಗಿಮ್ಮಡಿಯಾಗಿ ಮಾಯಾ ಚಾತುರಂಗಬಲಮಂ ಪಡೆದಿದಿರೊಳೊಡ್ಡಿರ್ದುದಂ ಕಂಡು ಕಾಳಸಂಬರಂ ಕೆಯ್ವೀಸಿದೊನಂಗಜನುಂ ಬೆಸಸೆ ಮಾಯಾವಡೆ ಪಿರಿದು ಪೊತ್ತು ಕಾದಿದಲ್ಲಿ ತನ್ನ ಪಡೆ ನೊಂದು ಕಟಿಲ್ದು ಕೆಡೆವುದುಮನಿದಿರ ಮಾಯಾವಡೆ ಗೆಲೆಯಿಱುವುದುಮಂ ಖೇಚರಪತಿ ಕಂಡು ವಿದ್ಯೆಗಳಂ ಬೆಸಸಿದೊಡರ್ಕನಗಂ ಪ್ರತಿವಿದ್ಯೆಗಳಂ ಬೆಸಸಿ ಭೇದಿಸಿ ಗೆಲ್ದಾಗಲ್ ಕಾಳಸಂಬರಂಗಾಕಂತಂಬರಮಟಿಲೊಗೆಯೆ ಪೆಱಗಂ ನೋಡಿ ಕಾಯ್ಪಿನೊಳ್ ಸ್ಯೆರಿಸದೆ ನೋಡಲ್ ಬಂದ ಕನಕಮಾಲೆಯಂ ಕಂಡು ಸಾರೆ ಕರೆದು ನಿನ್ನ ಪ್ರಜ್ಞಪ್ತಿ ವಿದ್ಯೆಯಂ

ಕಂ॥ ಬೆಸಸೆನೆ ಮೂದಲೆಯಾದೊಡೆ
ಪಿಸುಣೀ ತಲೆವಾಗುವಂತೆ ತಲೆಯಂ ಬಾಗಿ
ರ್ದ ಸದಾಚರಿತೆಯನಾ ಕಾ
ಳಸಂಬರಂ ಕ[ಂ]ಡು ಮುಳಿಸನೊಳಕೊಂಡು ಕರಂ

೭೪

ವ॥ ಮಸಾಗಿ ಮುನ್ನಮಿವನಂ ಕೊಂದಲ್ಲದೆ ನಿನಗೆ ತಕ್ಕುದಂ ಮಾಡೆನೆಂದು ರಥದಿಂ ನೆಲಕ್ಕೆವಾಯ್ದು ಬಾಳುಮತ್ತಪರಮುಮಂ ಕೊಂಡು ನಡವುದನಂಗಜಂ ಕಂಡು ಖಳ್ಗಹಸ್ತನಾಗಿ ನಡೆಯೆ ಗಗನದೊಳಿರ್ದ ನೋಟ್ಟನಾರದಂ ಕಂಡಿನ್ನಿರಲಾಗದೆಂದಿರ್ವರೆಡೆಗೆ ವಂದು ಕಾಳಸಂಬರನತ್ತ ವೋಡಿ ಮಾಣ್ ಮಾಣ್ ಎಂದಿಂತೆಂದಂ

ಕಂ॥ ಆಗದು ಮುಳಿಯಲ್ಕೆ ದಿಟಂ
ಬೇಗಂ ಸ್ತ್ರೀಜನದ ಮಾತಿವೊಳ್ ನಿನ್ನ ಮಗಂ
ಗಾಗದುದಂ ನೆಗಟ್ಟನಿತಣ
ಮಾಗದು ನೀನಿಂತುಮೊಳ್ಳಿತಾರಯ್ ನೃಪತೀ

೭೫

ವ॥ ಎಂದಾತನನೊಳ್ಳಿತ್ತಾಱ ನುಡಿದು ತರಿಸಿ ಕಾಮದೇವನತ್ತ ಬಂದು ನಿಮ್ಮಯ್ಯನ ನೊವನಾಱುಸುವುದಿಂತು ತಂದೆಯಂ ಪಟ್ಟಿದಿಂ ಪಾಱುಸುವುದಾವುದು ಧರ್ಮಮೆಂದು ಕೆಯ್ಯಂ ಪಿಡಿದೊಡಗೊಂದು ಬಂದಾಗಳಂಗಜನಿಂತೆಂದಂ

ಕಂ॥ ಪೆಱಱಾರ ಪೆಂಡಿರಾದೊಡ
ಮಱುವುಳ್ಳಂಗೆಱಗಿ ನೋಡಲಾಗೆಂದೊಡೆ ತಾ
ಯ್ಗೆ ಱಗುವರೆಂಬುದುಮಂ ಕೇ

ಳ್ದಱಿದಿರೆ ಬೇಡರ್ಕಳ[ಱ]ಲಿಯುಂ ಪೊಲೆಯರೊಳಂ

೭೬

ವ॥ ಅದುವನೆನಲಾಗದೆನ್ನೆಡೆಯ ಮಾತನೆಮ್ಮಬ್ಬೆಯನೆ ಬೆಸಗೊಳ್ಳಿಮೆನೆ ಕಾಳಸಂಬರಂ ಮತ್ತ ಕನಕಮಾಲೆಯಂ ಕರೆದು ಪುಸಿಯದಿರಱಿದೊ ?[ಡು]?ಕ್ಕೆವಮೇವುದೆನೆ

ಕಂ॥ ಏನಂ ಪೇೞ್ವೆನೊ ಪಾಪಮ
ನಾನೀತನಿಂತೆ ಕೊಲಲು ಪಣ್ಣಿದೆನೞಲಿಂ
ದಾನೆ ಕೊಲೆಗೆಯ್ದಿದೆಂ ಪೆಱ
ದೇನೆನ್ನಂ ಕೊಲ್ಲದಂದು ತಪದೊಳ್ ನಿಲ್ವೆಂ

೭೭

ವ॥ ಎನೆ ಕಾಳಸಂಬರನಿದಪ್ಪುದೆ ಪೆಂಡತಿಯನಿದೆ ಕೊಲ್ವುದಂ ತಪಕ್ಕೆ ಪೋಗೆಂ ದೊಡಾಕೆ ಪೋದಡೆ ಕಟ್ಟಿದಯ್ವದಿಂಬರುಮಂ ಕಟ್ಟಂ ಬಿಡಿಸಿತಂದುಕೊಟ್ಟಂತು

ಉ॥ ತಾಯಳಿಪಿಂದಮಪ್ಪ ಪಱಿಯುಂ ಕೃತಕೋಕ್ತಿಗೆ ನಂಬಿ ಕೊಳ್ವಭಿ
ಪ್ರಾಯದಳುರ್ಕೆಯಿಂದಿಱಿವ ತಂದೆಯನಿಕ್ಕುವ ಪಾಪಮುಂ ಪರೀ
?[ಕ್ಷಾಯತ]? ಶುದ್ಧಿಯಿಂ ತೊಲಗಿಪೋದೊಡೆ ರಾಗೊಸೊ ಮನ್ಮಥಂ ಸುಖೋ
ಪಾಯದಿನಿರ್ದನೇ ಗುಣದ ಪೆಂಪಿನೊಳಕ್ಕುಮೆ ಪಾಪಬಂಧನಂ

೭೮

ಗದ್ಯ॥ ಇದರ್ಹತ್ಸರ್ವಜ್ಞ ಪಾದಪದ್ಮವಿರಾಜಿತೋತ್ತಮಾಂಗ ಶ್ರೀ ಬಂಧುವರ್ಮ
ನಿರ್ಮಿತಮಪ್ಪ ಹರಿವಂಶಾಭ್ಯುದಯದೊಳ್ ಕಾಮದೇವನುತ್ಸವಂ
ಅಷ್ಟಮಾಶ್ವಾಸಂ

ನವಮಾಶ್ವಾಸಂ

ಕಂ॥ ಅಂತಂಗಜನುಂ ಖಗಪತಿ
ಯುಂ ತಮ್ಮೊಳ್ ಕಲಹಮುಮನುಱಿದು ಕೂಡಿರ್ದು ಬೞಿ
ಕಿಂತೆಂದಂ ನಾರದನ
ತ್ಯಂತ ಗುಣೋಪೇ ?{ತನೀ]?ತನಲ್ಲಿಗೆ ವಂ ?[ದಂ]?

೧

ವ॥ ಈತಂ ತ್ರಿಖಂಡಮಂಡಳಾಧಿಪತಿಯಪ್ಪ ನಾರಾಯಣಂಗಂ ರುಗ್ಮಿಣಿಮಹಾ ದೇವಿಗಂ ಪುಟ್ಟಿದಾಗಳೀತನ ಪೂರ್ವ ವೈರಿಯಪ್ಪ ಅಸುರನೆತ್ತಿಕೊಂಡು ಪೋದೊಡೆ ಕೂಸಂ ಕಾಣದೆ ತಾಯುಂ ತಂದೆಯುಂ ಮಱುಗುತಿರ್ದು ನಿಮ್ಮ ಕೂಸು ಸಾವನಲ್ಲನೆಂಬ ದಿವ್ಯ ಧ್ವನಿಯಂ ಕೇಳ್ದು ಸಂಟೈಸಿರ್ದುಮೆನ್ನನಱಸಲಟ್ಟಿದೊಡಂ ಪೋಗಿ ಪೂರ್ವವಿದೇಹದೊಳ್ ಸೀಮಂದರ ತೀರ್ಥಕರಂ ಬೆಸಗೊಂಡೊಡೆ ಕೂಸಂ ಧೂಮಕೇತುಮೆಂಬಸುರನೊಯ್ದು ಖಡಿರವನದ ತಸ್ಕ್ರಶಿಲೆಯ ಮೇಲಿಕ್ಕಿ ಪೋದೊಡೆ ಮೇಗಕೂಟದ ಕಾಳಸಂಬರನೆಂಬ ವಿದ್ಯಾಧರರಾಜಂ ಕಂಡು ಕೊಂಡು ನಡಪಿದಪ್ಪನಲ್ಲಿ ಬಳೆದು ವಿದ್ಯಾಪರಿಪೂರ್ಣನಾಗಿರ್ದನೆನೆ ಕೇಳ್ದು ಬಂದೆನೀತನನವರೊಳ್ ಕೂಡುವೆನೊಯ್ದಪೆನೆನೆ ಕಾಳಸಂಬರನಿಂತೆದಂ

ಕಂ॥ ಇಂತಪ್ಪ ಗುಣೋಪೇತನೊ
ಳಿಂತಾ ನೆಗಟ್ದಱ ೩[ಯಮಿ]೩ಕ್ಕೆಗಂ ಪೆಱದಿ೪[ಲ್ಲೆಂ]೪
ತಾಂ ತೊತ್ತುವೆಸದೊಳಿಪ್ಪೆಂ
ಸಂತತಮಿನ್ನರಸುಗೆಯ್ಯುತಿರ್ಪುದು ಪೆಱದೇಂ

೨

ವ॥ ಎಂದು ಕಾಳಸಂಬರನಂ ಪಶ್ಚಾತ್ತಾಪದಿನಾದನುಕಂಪೆಯುಮಂ ಮುನ್ನಂ ನಾರದನ ಪೇಟ್ದ ಜನ್ಮಸಂಬಂಧಮುಮಂ ಕೇಳ್ದು ಕಾಮದೇವಂ ತಂದೆಗಿಂತೆಂದಂ

ಕಂ॥ ಅಡವಿಯೊಳಹಿತಂ ಬಿಸುಟೊಡೆ
ಮಡಿಮಡಿದತಿಶಯದೆ ನೀಮೆ ತಂದನುನಯದಿಂ
ನಡಪಿದೊಡೆ ಬರ್ದೆನಲ್ಲದೊ
ಡಡಂಗಿದೆಂ ಖಗದ ಮೃಗದ ಬಸಿಱೊಳಗಲ್ತೇ

೩

ವ॥ ಎಱನಗೀ ಭವಕ್ಕೆ ನೀಮೆ ತಾಯುಂ ತಂದೆ ಯುಮಲ್ಲದೆ ಪೆಱರಿಲ್ಲೀ ಕೃತಕ ಮನೆಂತು ನೀಗುವೆಂ ವಿಚಾರಿಸದೆ ನೀಮೆನಗೆ ಮುಳಿದು ಕೊಲ್ವುದಂ ಕಂಡು ಕಯ್ದುವಿಡಿ ದೆನದಕ್ಕಿಂತು ಮಿ೧[ಡುಕ]೧ದಿಪ್ಪುದು ನೀಮೆ ಸುಖದಿನರಸುಗೆಯ್ದು ದೆನ್ನಂಬಿಡಿವಾಂ ಪೋದೊಡಲ್ಲದವರ ನೋವಾಱದಿವರುಂ ಬಂದಿರ್ದರೆಂದೆನೆ ತಾನುಮೊಡಂಬಡಿಸಿ ಪೋಗಲೆಂದು ಸಮಕಟ್ಟಿದಾಗಳ್ ತಾಯರ್ಥಿಯಂ ನಾರದನಱಿದು ಗೋಶೀರ್ಷಚಂದನಮುಂ ರತ್ನಮಯಮಪ್ಪ ಪಲವುಂ ಪ್ರತಿಮೆಗಳನಲ್ಲಿ ಬೇಡಿಕೊಂಡು ಕಾಮವಿಮಾನಮಂ ನೆನೆವುದು ಮಂತೆ ಬರಲದಱೊಳಗಿಟ್ಟು ತಾನುಂ ನಾರದನುಮೇಱ ತೆಂಕಮೊಗದೆ ಗಗನಮಾರ್ಗದಿಪಯಣಂ ಬರುತ್ತಂ ತನ್ನ ತಾಯುಂ ತಂದೆಯ ವಂಶಾವಳಿಯಂ ಬೆಸಗೊಂಡು ಕೇಳುತ್ತಂ ಬರೆ ವಿಮಾನಂ ಮೇಗಿನಿಸು ನೆಗೆದು ಪಾಱುವಾಗಳಧೋಭಾಗದ

ಕಂ॥ ಗಿರಿ ನದಿ ವಿಷಯಾಬ್ಧಿಗಳಂ
ಧರಿತ್ರಿಯೊಳ್ ನೋಡಿ ನೋಡಿ ಬೆಸಗೊಂಡಿರದಂ
ಬರದತ್ತ ನೋಡಿ ಜೋತಿ
ಷ್ಕರತೆಱನುಮನಂತೆ ಬೆಸಗೊಳುತ್ತಂ ಪೋದಂ

೪

ವ॥ ಪೋಗಿ ಖದಿರವನದಲ್ಲಿಯು ಬಪ್ಪಾಗಳಿದು ನೋಡು ನಿನ್ನ ಪಟ್ಟ ತಸ್ಕರಶಿಲೆಯೆಂದೊಡೆ ವಿಮಾನಮನಿನಿಸು ಸಮಿಪವರ್ತಿಯಾಗಿ ಮಾಡಿ ತೋಱುತ್ತಂ ಬಂದು ಹಸ್ತಿನಪುರದಲ್ಲಿ ಬಪ್ಪಾಗಳಿದಾವ ಪೊಟಿಲೆನೆ ನಾರದನಿಂತೆಂದಂ

ಕಂ॥ ೨ [ಕುರುಪತಿದು]೨ ರಿಯೋಧನನೆಂ
ಬರಸಂ ಕೇಳ್ ನಿನಗೆ ಮಾ೩[ವ]೩ನಪ್ಪೊಂ ನೆಗಟ್ದೀ
ಪುರದಧಿಪತಿಯಿದು ಹಸ್ತಿನ

ಪುರಮೆಂಬುದು ಸಕಳ ಧಾರಿಣೀತಿಳಕನಿಭಂ

೫

ವ॥ ಎಂದೊಡೆ ವಿಮಾನಮನಿನಿಸು ಸಮಿಪವರ್ತಿಯಾಗಿ ಮಾಡಿ ತೋಱುತ್ತಂ ಪೊಟಲನರ್ತಿಯೊಳ್ ನೋಡುತ್ತಂ ಬರೆ ಪುರ ಬಹಿರಿಹೆಯೊಳ್ ಬಿಟ್ಟಿರ್ದ ಪಿರಿಯ ಬೀಡಂ ಕಂಡಿದೇನಾರ ಬೀಡುಮಿಲ್ಲಿಯೇಕೆ ಬಿಟ್ಟಿರ್ದುದೆಂದೊಡೀ ಪೊಟಲನಾಳ್ವ ದುರ್ಯೋಧನನ್ಗನ್ ಜಯಧಿಯೆಂಬರಸಿಗಮುದಧಿ ಎಂಬ ಕುಮಾರಿ ಪುಟ್ಟಿದಳಾಕೆಯಂ ನಿನಗೆ ಬಸಿರ್ಪೂಸಿ ಪೆತ್ತು ನಿನ್ನಂ ಕಾಣದೀಗಳ್ ನಿಮ್ಮಮ್ಮನ ಪಿರಿಯರಸಿ ಸತ್ಯಭಾಮೆಯೆಂಬಳಾಕೆಯ ಮಗಂ ಭಾನುಕುಮಾರಂಗೆ ಕುಡಲೆಂದು ಮಹಾವಿಭೂತಿಯಿಂದೊಯ್ದುಪ್ಪೊರಾ ತಂಗೆ ಮದುವೆಯಾದೊಡೆ ನಿಮ್ಮಬ್ಬೆಯ ತಲೆಯಂ ಕೊಯ್ದುಕೊಂಡು ಪೋಗಿ ಸತ್ಯಭಾಮೆ ಮೆಟ್ಟಿ ಮಿವಳೆನೆ

ಕಂ॥ ಅಂತಪ್ಪೊಡೆ ನೀಮನ್ನೆಗ
ಮಿಂತಿರಿಮಾಂ ಪೋಗಿ ನೋಡಿ ಬಂದಪೆನಾ ಕೂ
ಸೆಂತುಟು ಸಿರಿಯೆಂತುಟು ಶೀ
ಲೆಂತುಟು ಪೆಂಪೆಂತುಟೆಂಬುದಂ ಮುನಿನಾಥಾ

೬

ವ॥ ಎಂದು ನಾರದನಂ ನೀರದಪಥದೊಳಿರಿಸಿ ವೃದ್ಧನಾವಿದನಾಗಿ ಕಳಾಚಾರಿಯೋಪಾಯದಿಂ ತೀವಿದ ಚೀರಮನಿಱುಂಕಿ ಪೋಗಿ ದುರ್ಯೋಧ [ನನ] ಮನೆಯ ಬಾಗಿಲ್ಗೆ ವಂದು ನಾರಾಯಣನ ಮನೆಯ ಪಾಟೂವಳಿಯೊಳ್ ಬಂದ ನಾವಿದನೆನೀ ವಿವಾಹಕಾರ್ಯಕ್ಕೆ ನೀನೆಯಪ್ಪುದು ಪೋಗೆಂದು ಎನ್ನನಟ್ಟಿದೊನಿದೆನ್ನ ಬಂದಂದಮೆಂದು ನಿಮ್ಮರಸಂಗೆ ಪೇೞಿಮೆಂದೊಡೆ ಪಡೆಯಱಿಂ ಪೋಗಿ ಪೇೞ ಬರವೇೞನೆ ಬಂದು ಕಂಡಾಗಳಾಹಾ ಭಾವನಟ್ಟಿದ ನಾವಿದನ ಸದ್ಭಾವವೊಳ್ಳಿತ್ತಾಯ್ತೆಂದು ತೆಡಱತಾದೊಡಮೇನೆಂದು ನಾವಿದನೊಡನೆ ಬೆಸಗೆಯ್ ಪೋಗೆಂದು ನಾಂದೀಮುಖದೊಸಗೆಗೆ ಕೆಯ್ಗೆಯ್ವುದೆಂದು ಮದುವಳಿಗೆಯಲ್ಲಿಗಟ್ಟಿದೊಡೆ ಕೂಸಂ ನೋಡಿ

ಕಂ॥ ಆವಳ್ ದೊರೆ ಭುವನದೊಳಿಂ
ತೀ ವಧುಗತಿವಿನುತಮಾಗುವೀ ರೂಪಿನೊಳೀ
ಹಾವದೊಳೀ ಭಾವದೊಳಿಂ
ತೀವಳೆ ವಿಳಾಸದೆಡೆಯೊ [ಳೆ] ವಿಭ್ರಮ [ದೆಡೆಯೊಳ್]

೭

ವ ಎಂಧು ಮೆಚುತಿರೆ ಬಂದವರ ನಾನಿದಂ ಕನ್ನೆಯ ಪುರ್ವುಂ ನೊಸಲುಮಂ ಸಮೞಿದಾಗಳಾ ಪುರ್ವುಂ ಬೋಟಿಪುರ್ವಾಗೆ ನೊಸಲುಂ ತರಟ್ಟನಂತಾಗೆ ವಿದ್ಯೆಯಂ ಮಾಡಿದೊಡೆ ಕಂಡವರಿಂತಾರ್ ಮಾಡಿದರೆಂದು ತಂತಮಗೆ ನುಡಿಯುತ್ತಿರೆ ಅರಸನಱಿದು ತಮ್ಮ ನಾವಿದಂಗೆ ಮುಳಿದು ಭಾವನಟ್ಟಿದ ನಾವಿದನಂ ನೀಂ ಮಾಡಿಮೆನೆಯಾತಂ ಕಳೆದು ಕೊಂದತಿಶಯಮಾಗೆ ಮಾಡಿ ಕಯ್ಗೆಯ್ಸಿದಾಗಳ್ ಮೆಚ್ಚಿ

ಕಂ॥ ಬಿದಿ ವದನಮೆಂಬ ಕಮಳಮ
ನುದಧಿಯ ಮೆಯ್ಯೆಂಬ ಕೊಳದೊಳಿಂಬಾಗಿರೆ ಪ

ಣ್ಣಿದ ಸರಲಂ ಮಾಱಿಂಬೊ ಡ್ಡಿದ ತೆಱದಂ ೆ[ತು]ೆ ರ್ಚಿಪೋಯ್ತು ನಾವಿದನೆರ್ದೆಯಂ

೮

ವ॥ ಕನ್ನೆಯ ರೂಪಿನೊಳ್ಪಂತು ನಾವಿದನೆರ್ದೆಯನುರ್ಚಿ ಸೈರಿಸದೆ ಮಂಗಳ ಕಾರ್ಯದೊಳ್ ಶಾಸನದೇವತೆಗಳೆಲ್ಲಂ ಪೊಱಗಣಲ್ಲಿ.........ಯ್ದು ಪೊಡ.......ಕನ್ನೆಯನೆತ್ತಿ ಕೊಂಡು ಪೊಱಮಟ್ಟೆಲ್ಲರುಂ ನೋಡೆ ನೋಡೆ ಬೇಗಮಾಕಾಶಕ್ಕೊಗೆದುಯ್ದು ವಿಮಾನ ದೊಳ್ಗಿಟ್ಟಾಗಳಲ್ಲಿರ್ದ ನಾರದನಂ ಕಂಡು ಪೊಡೆವಟ್ಟೊಡೆ ಕಾಮದೇವನೊಳ್ ಕೂಡುವೆಯಾಗೆಂದು ಪರಸಿದೊಡೆ

ಕಂ॥ ಓವೋವೆನ್ನಂ ಕುರುನೃಪ
ದೇವಿ ಬ್ಬಿರ್ಪೂಸಿ ಪೆತ್ತೊಡಾತಂಗೇನು
ದ್ಭಾವೋಗ್ರ ದುರಿತ ಫಲದಿಂ
ದಾವಿಭು ಗೆಂಟಾದೊನಾಗೆ ಮಱುಗುತ್ತಿರ್ದೆಂ

೯

ಅಂತು ಮಱುಗುತ್ತಮಿರ್ದಳ
ನಂತಿರಿಸದೆ ಮತ್ತೆ ಸತ್ಯಭಾಮೆಯ ತನಯಂ
ಗಂತು ಕುಡಲುಯ್ಯೆ ನಾವಿದ
ನಿಂತೀತಂ ತಂದೊನೇವೆನೀಗಳೆ ಸಾವೆಂ

೧೦

ವ॥ ಎನುತಂ ವಿಮಾನದಿಂ ತೊಟ್ಟನೆ ನೆಲಕ್ಕೆ ಮೆಯ್ಯನಿಕ್ಕಿದಾಗಳಂಗಜಂ ವಿದ್ಯಾಬಲದಿಂ ಪಿಡಿದುತಂದು ವಿಮಾನದೊಳಿರಿಸಿ ತನ್ನ ನಿಜಸ್ವರೂಪಮಂ ತೋಱಿದಾಗಳ್ ನಾರದನೆಂದನೀತಂ ನೋಡು ಕಾಮದೇವಂ ವಿದ್ಯಾಧರಶ್ರೇಢಿಯೊಳ್ ವಿದ್ಯಾಧರನಾಗಿರ್ದನ ನೊಡಗೊಂಡು ಬಂದೆನೆನೆ ಮೊಟಗಂ ಕೇಳ್ದ ನವಿಲಂತೆ ರಾಗಿಸಿ ಪಾವಂ ದಾಂಟಿದರಂ ತುಮ್ಮನೆ ಬೆಮರ್ತು ಸೋಲದ ಭರದಿಂದೆಱಗಿದರಂತೆ ತಲೆಯಂ ಬಾಗಿರೆ ಕಾಮದೇವನಿಂತೆಂದಂ

ಕಂ॥ ಮನ್ನಿಸಿ ತಾಯುಂ ತಂದೆಯು
ನಿನ್ನಂ ಬಗೆದೀಯೆ ಕೊಳ್ವೆನೆಱಿಕೋಳ್ಗೊಳ್ಳೆಂ
ಸನ್ನುತನುಯ್ವುತ್ತಿರೆ ತಂ
ದೆನ್ನಯದಿಟದಿಂದ ಬೇಗವೊಪ್ಪಿಸಿ ಬನ್ನಿಂ

೧೧

ವ॥ ನೀನುಂ ಮಗುೞ್ಚಿ ಕಳಿಪಿದೆನೆನ್ನನೆಂದು ಬಗೆಯದಿರೆಂತುಂ ತಪ್ಪೆನೆಂದು ಸಂತಯ್ಸಿದಾಗಳ್ ನಾರದನುದಧಿಯುಂ ಬೆರಸು ನೆಲಕ್ಕಿೞಿತಪ್ಪೊಂ ಸ್ತ್ರೀಸಂಸರ್ಗದಿಂ ತಪಸ್ವಿಯಾದೊಡಮಧೋಗತಿಗಿೞಿ ಗುಮೆಂಬುದನಭಿನಯಿಸುವಂತೆ ದುರ್ಯೋಧನನ ಮನೆಯನೆಯ್ದೆವಪ್ಪಿನಂ ತಾಯುಂ ತಂದೆಯುಂ ಪುರಮುಮಂತಪುರಮುಂ ದೆಸೆಯುಮಾ ಕಾಶಮಂ ನೋಡುತ್ತಂ

ಕಂ॥ ಹಾ ಸರೆ[ಸಿಜ]ೆದಳನೇತ್ರೇ
ಹಾ ಸಕಳ ಕಳಾಸಮೇತ ಹಿಮಕರವಕ್ತ್ರೇ
ಹಾ ಸಲ್ಲಕ್ಷಣಗಾತ್ರೇ

ಹಾ ಸೌಂದರ್ಯಾಭಿಯುಕ್ತ ಪುಣ್ಯಪವಿತ್ರೇ

೧೨

ಚಂ॥ ದೊರೆಗೆವರಲ್ ಜಗತ್ರಯದೊಳಿಲ್ಲೆನಿಸಲ್ ನೆಱಿವಂಬುಜಾನನೇ
ಸ್ಮರಶರ ಶಕ್ತಿಯುಕ್ತ ನಯನಾಮೃತರೂಪಸಮೇತೆ ನಿನ್ನನೀ
ಧರಣಿಯೊಳಾರ್ಗಮಿಕೆ ಕುಡಲೀಯಮಾ ವಸ್ತುವನೆಂದು ಮೋಹದಿಂ
ಸುರವರರೊಯ್ದರೋ ದನುಜರೊಯ್ದರೊ [ಖೇಚರ್] ರಾಜರೊಯ್ದರೋ

೧೩

ವ॥ ಎಂದಿತೆನಿತಾನುಂ ತೆಱದಿಂ ಪ್ರಳಾಪಂಗೆಯ್ಯುತ್ತಿರೆ ರಾಗರಸಮಹೋದಧಿ [ಯಂ] ತಂದು ಮುಂದಿರಿಸಿದಾಗಳ್ ಪೋದ ಪ್ರಾಣ ಮಗುಟ್ದು ಬಂದಂತೆ ರಾಗದಿಂ ಕನ್ನೆಯಂ ತಂದ ನಾರದಂಗತಿಪ್ರಿಯಂಗೆಯ್ದು ಬೆಸಗೊಂಡೊ ಡಾನೊರ್ವಸುರಕುಮಾರ ನೊಯ್ಯೆ ಕಂಡು ನಯದಿನೊಡಂಬಡಿಸಿ ತಂದೆ ನೀಮಿಂ ಸುಖದಿನಿರಿಮೆನಗೆ ಮನೆವಾರ್ತೆ [ಯುಂಟೆಂ]ದು ಮಗುಟ್ದು ಕಾಮದೇವನುಂ ತಾನುಂ ಬರುತಮಿರೆಯಿರೆ ದುರ್ಯೋಧನನ ಪಡೆಟಿಂ ತಡೆಯಲೆಡೆಯಿಲ್ಲೆಂದಾಗಳ್ ದಾಟೂದಾಟಿಯಿಂ ಪಯಣಂಬೋಗೆ ವಿಮಾನದೊಳ್ ಪೋಪ ಮನ್ಮಥನಾ ಪಡೆಯಂ ಕಂಡೀಯಡವಿಯೊಳ್ ನಡೆವ ಪಡೆಯಾರದೆಂದೊಡೆ ಕೂಸನೊಡಗೊಂಡೊಯ್ವ ಕೌರವ ಪಾಂಡವರ ಪೆರ್ವಡೆ ತಮ್ಮ ಬಲ್ಲಾಳ್ತನದೊಳಂ ಮಾಯಾವಿಗಳ ದೆಸೆಯ ಬೆರ್ಚಿನೊಳಂ ಬೇಗಂ ಪೋದಪ್ಪರೆಂದೊಡವರ ಬಲ್ಲಾಳ್ತನಮುಮನೆನ್ನುಮನಿನಿಸು ನೋಡುತ್ತಿರಿಮೆಂದು ವಿನಾನದಿಂ ಧರೆಗಿೞಿದು

ಕಂ॥ ಮುಱಿದ ಬಿಲು ಪಱಿದ ಕೈ [ಪೊ]ಡೆ
ತಱಿದ ಸರಲ್ ತಪ್ಪನಾರಿ ತೇದೊೞಿ ಮುಕ್ಕಿಂ
ನೆಱಿದಲ [ಗು] ನೇಲ್ವ ಬಣರುಡೆ
ಕಿಱುವೀಲಿಯ ದಂಡೆ ಪಣೆಯೊಳಮರ್ದಿರೆ ಶಬರಂ

೧೪

ವ॥ ಅಂತು ಶಬರವೇಷಮಂ ಕೆಯ್ಕೊಂಡು ಮುಂದಣ್ಗೆ ಬಂದು ಬಟ್ಟೆಯೊಳಡಮಿರ್ದು ಸುಂಕಮಿಕ್ಕಿಮೀ ಪೞುವದ ಬಟ್ಟೆಯ ಸುಂಕಮನೆನಗೆ ನಾರಾಯಣನಿತ್ತ[ಂ] ಮೆಳ್ಪಡವೇಡಾ

ಕಂ॥ ಇಕ್ಕುವುದು ಸುಂಕಮಂ ನೀ
ಮಿಕ್ಕದೆ ನಡೆವಾಗಳುಗ್ರ ಕೋಪದಿನಿದಿರಾಂ
ತಿಕ್ಕುವೆನಾನೀಗಳೆ ನೆಲ
ಕಿಕ್ಕುವವೊಲ್ ಕೆಯ್ಯ ಕೂಸನವಯವದಿಂದಂ

೧೫

ವ॥ ಎನೆ ಮುಂಗೋಳ ನಾಯಕರ್ ಬೆಕ್ಕಸಮಾಗಿ ತಲೆಯಂ ತೂಗಿ

ಕಂ॥ ಕುರುಪತಿ ತನ್ನಾತ್ಮಜೆಯಂ
ಸುರಪತಿನಿಭನಪ್ಪ ತನ್ನ ಪಿರಿಯ ಮಗಂಗಾ
ದರದಿಂ ಕುಡಲೆಂದೊಯ್ಯು

ತ್ತಿರೆ ಕಂಡೆಲೆ ಪುಳ್ಳಿವೇಡ ಸುಂಕಂ ಬೇೞ್ಪೊ

೧೬

ವ॥ ಎನೆ ಪುಳ್ಳಿವೇಡನೆಂಬುದೆನಗಪ್ಪುದು ಸಾಯಲಮ್ಮದವರಿನ್ನೆನಗಾತು ಸಾವರದಱಿಂದನವರತಂ ಪುಳ್ಳಿವೇೞ್ದಿ ಸೂೞು ನೀವೆಂದಂತೆ ವಲಮೆಂದಾತನಂ ಬಯ್ದು ಮಾತಂಗೆ ಬಯ್ಗುಳಪ್ಪಂತು ಮಗುರ್ಚಿದ ತರ್ಕಮುಮಂ ಮನದ ದರ್ಪಮುಮನಱಿದೀತನಂ ಕಂಡಿಱಿಸಲಾಗಿದೇನಾನುಮೊಂದು ಕೌತುಕಮಾಗಲೆವೇೞ್ಗುಮೆಂದಂತೆ ಗೋೞುಂಡೆಗೊಂಡಿರ್ಪಿನಂ ಭೀಮಾರ್ಜುನ ನಕುಳ ಸಹದೇವರ್ಕಳೆಯ್ದೆವಂದರಿದೇನೆಂಬುದು ಸುಂಕಮೆಂದನನೆ ಕೆಲರ್ ನಕ್ಕರ್ ಕೆಲರ್ ಮುಳಿದಿಱಿಯಲ್ ಬಗೆದರ್ ಕೆಲರ್ ಮರುಳು ನೂಂಕಿ ಕಳೆದು ನಡೆಯಿಮೆಂದರಂತವರೆಲ್ಲರಂ ಬಾರಿಸೆ ಸಾರೆವ್ಮ್ದರ್ಜುನನೇನನೀವುದು ಪೇೞೀನೆ ಕಿರಾತನಿಂತೆಂದಂ

ಕಂ॥ ಏನಂ ಪೇೞ್ವನು ಪಡೆಯೊಳ
ಗೇನೊಳ್ಳಿತ್ತದನೆನೆ ಬೆಱಗಾಗಿರ್ದನದ [ನಾ
ನೇನಱಿದಪೆ] ನೇ ವಿಷ್ಣುವ ಸೂನುಗೆ ಕುಡಲುಯ್ದ ಕೂಸನುದಧಿಯನೀಯಿಂ

೧೭

ವ॥ ಎಂದೊಡೆ ಬಾಯೊಳ್ ಕಯ್ಯನಿಟ್ಟಂದೇಂ ಚೋದ್ಯಮೊ ಮೇಗಿಲ್ಲದ ನುಡಿಯೆಂದೆ ಬೆಱಗಾಗಿರ್ದರೆಲ್ಲರುಂ ಭೀಮನಾಥನ ರೂಪಂ ನೋಡಿ ನಕ್ಕಿವನನುರುಳೆ ನೂಂಕಿನಡೆವಮೆಂದೊಡಾ ಮಾತು ಆವಾಗಳುಮುಂಟೆ ವಲಮೆಂದು ಮತ್ತಮರ್ಜುನನಿಂತೆಂದಂ

ಕಂ॥ ಮದನಂ [ಗೆ ಬ] ಸಿರ್ಪೂಸಿ
ರ್ದದು ಕೂಡದೆ ಮತ್ತಮನ್ನನಪ್ಪಂಗೆ ಕೊಡಲ್
ಪದೆದನುರಾಗದಿನಾಮು
ಯ್ದುದಱಿಂ ಬೇಡಂಗೆ ಕುಡುವುದಿದು ಲೇಸಲ್ತೇ

೧೮

ವ॥ ಎನೆ ನಿಮ್ಮಂ ತೆಗೞ್ವುದೆ ನನ್ನಿಯೆನ್ನುಮಂ ನಾರಾಯಣಂ ಮಗನೆಂದೆ ಕೆಯ್ಕೊಂಡಿರಿಸಿದನಾಂ ಸಲುಗೆಯ ಮಗನೆನಗೆ ಬೇಡಿತಿಯರ್ ಪಲರುಂ ಪೆಂಡಿರೊಳರಾದೊಡ ಮರಸರ ಮಗಳಂ ಕೊಳ್ವನಿತರ್ಥಿಯಾದುದೆನೆ ಭೀಮಂ ಕಿನಿಸಿ ಪಿಶಾಚದ ಮಾತನೇ ಗೇೞ್ವುದು ಬಡಿದು ಪಿಡಿದೆೞೆದಿಕ್ಕಿ ನಡೆಯಿಮೆನೆ ಕಿರಾತಂ ಮಾಯಾಬಲಮಂ ವಿಗುರ್ವಿಸಿ

ಮಂದಾನಿಲ ರಗಳೆ॥
ಎಸೆದವು ಪಱಿಗಳು ಪಲವೊಡನೆ ಕರಂ
ಪಸತೊಡನೆ ಧನುರ್ಧರ [ನಿಕರ] ಕರಂ
ತೆರೆ ಕವಿವವೊಲಾದವು ತುರಗಬಲಂ
ತರತರದಿಂದೋಡಿತು ರಥದ ಬಲಂ
ಕವಿವದ್ರಿಯವೋಲಿಭಭಯ ಮಸಕಂ
ತವರದ ತೊಱೆ ಪರಿವವೊಲಣೆಯೆಸಕಂ
ಇಂತಾ ಪಡೆಗಿಮ್ಮಡಿ ಪಡೆಯೆಂದಂ

ಕಂತುವಿನವೊಲಮರೇಂದ್ರಂ ಪಡೆಯಂ
ಪಡೆಯುಂತೆ ಕೈವಿಸೆ ಮಹಾರವದಿಂ
ಪಡೆ ತಾಗಿದವೊಡನೊಡನತಿಜವದಿಂ
ಕಿಡಿಗುಟ್ಟುವ ತೆಱದೊಳೆ ಚತುರಂಗಂ
ಕಡಿಕೆಯ್ದಿಱಿಯುತ್ತಿರೆ ರಣರಂಗಂ
ಪಡಲಿಟ್ಟೆಡೆಯಂತಾದುದು ಪೆಣದಿಂ
ರೌದ್ರಮುಮಾದುದನತಿಭಯದಿಂದಂ
ತಣಿದವು ನಿಶಿಚರಗಣಮುಂ ಧುರದೊಳ್
ಕುಣಿದಂ ನಾರದನೊಸೆದಂಬರದೊಳ್

೧೯

ಕಂ॥ ಪಾಂಡವ ಕೌರವಸೇನೆಯ
ಕೊಂಡಾಟದ ಸುಭಟರಂತು ಕೆಡೆದಂತಗಳ್
ಕಂಡಲ್ಲಿಯೆ ನರಪತಿಗಳ
ತಂಡಂ ಕಡಿಕೆಯ್ದು ಕಯ್ದುಕೆಯ್ದಿಂತೆಂದರ್

೨೦

ವ॥ ಅಂತೆಯ್ದೆವಪ್ಪ ನಾಯಕರ ಬಲವಂ ಕಾಮದೇವಂ ಕಂಡು ಸ್ತಾಂಭಿನಿಯೆಂಬ ವಿದ್ಯೆಯಂ ಬೆಸಸಿದಾಗಳ್ ಭೀಮಸೇನನ ನಿಮಿರ್ದ ಗದೆ ಕಾಲ್ಗೆಟ್ಟರ ಪಜ್ಜೆಯಂತಳ್ಳಾಡದಿರೆ ನಚ್ಚುವರ್ಜುನನ ತೊಟ್ಟಂಬುಂಗುರದೊಡ್ಡಂ[ತೆ] ಬೆರಲಿಂ ಪೋಗದಿರೆ ನಕುಳಕೊಂತಂ ದಿಗ್ದಂತಿದಂತದಂತೆ ತಳರದಿರೆ ಸಹದೇವನ ಪಿಡಿದ ಬಾಳ್ ಮರದೊಳ್ ತೆತ್ತಿಸಿದ ಬಾಳಂತೆ ಮಸಗದಿರೆ ಕರ್ಣನಂಬಿಗೆ ನೀಡೆದ ಕೆಯ್ ಲೋಭಂಗೆ ನೀಡಿದ ಕೆಯ್ಯಂತೆ ತೆಗೆಯಲಾಱದಿರೆ ವಿಕರ್ಣನಾರ್ಕರ್ಣಂಬರಂ ತೆಗೆದ ಬಿಲ್ ಕೆನ್ನೆಯೊಲ್ ತೊಡರ್ದು ಪತ್ತಿರೆ ಶಲ್ಯನಖಲ್ಯನಂತೆ ತೊಡರದಿರೆ ಮುಳಿದು ರಥಮನೇಱದ ಶಕುನಿ ಕೆಂಪೇಱದ ಶಕುನಿಯಂತೆ ತೂಂಕಡಿಸುತ್ತಿರೆ ದುಶ್ಶಾಸನಂ ನಿಶ್ವಾಸನಮಪ್ಪಗ್ರಶ್ರಮಂ ಭೂರಿಶ್ರ[ಮ] ಮಾದಂತೆ ಮಿಡುಕದಿರೆ ದ್ರುಪದಂ ಕಾಲುಡಿದ ಚತುಷ್ಪಾದದಂತೆ ನಿಲಲಾಱದಿರೆ ಧೃಷ್ಟದ್ಯುಮ್ನಂ ವಿನಮ್ನನಾದಂತೆ ತಲೆಯೆಱಗದಿರೆ ಘಟೋತ್ಕಚನರ್ಜುನವೃಕ್ಷದಂತೆ ಮರನಾಗಿರೆ ಅಭಿಮನ್ಯು ಮಂಜು ಪಾಯದ ತಾವರೆಯಂತೆ ಸುಕ್ಕಿರೆ ಮತ್ತಂತೆ ಪಡೆಯೆಲ್ಲಮುಂ ಚಿತ್ರಸಭಾಸದ ಸಭೆಯಂತೆ ನಿಶ್ಚೇಷ್ಟಿತರಾಗೆ ಕಿಸಿಸಿದೊಡೆ ದುರ್ಯೋಧನನ ಸಾರಿರ್ದ ಭೀಷ್ಮರುಂ ದ್ರೋಣಾಚಾರ್ಯರುಂ ಕುರುಪತಿಗಂ ಧರ್ಮಜಂಗಮಿತೆಂದರ್

ಅಕ್ಕರ॥
ಮೂಱಪ್ಪಂತು ಕೀಲಿಪ ವಿದ್ಯೆಯಂ ಬಲ್ಲನೊಳ್ ಕಡಿಕೆಯ್ದು ಮೆಲ್ವಾಯ್ದುಯೆ
ಗ್ಗರಪ್ಪವೊಡೆಗುಲಂ ಬೇವಾಗಳೆರ್ದ ಕಿಚ್ಚುಗಂಡು ಅಗ್ನಿದೇವನಂ ಮಾದೇವನು
ಮಱುಗುಮಿಂದಲ್ಲಿಂ ಪೊಱಮಟ್ಟು ಧರ್ಮಿಯಂತೆ ಸಿಗ್ಗಿದೇನಯ್ಯ ನಮಗಿಲ್ಲಿ
ಮಾಯಾವಿಯಪ್ಪನುಂ ಕೃಷ್ಣನುಂ ತಾವಱುವರೇ (?)

೨೧

ವ॥ ನಮಿ ಕಜ್ಜಮಂ ನಾರಾಯಣನ ಮೇಗಿಕ್ಕಿ ನೆಗಟ್ವೆಮೆಂದು ದುರ್ಯೋಧನನನೊಡಂಬಂದಿರ್ವರುಂ ತಮ್ಮ ಪಡಲ್ವಟ್ಟ ಪಡೆಯುಮನಘಪಟ್ಟ ನಾಯಕರುಮಂ ನೋಡುತ್ತಂ ಪೋಗಿ ಕಿರಾತವೇಷದ ನಾಯಕನಲ್ಲಿಗೆ ವಂದಪೆಮೆಂದಟ್ಟಿ ಮಾಯಾವಡೆಯೊಳಗನೆ ಪೋಗಿ ಕಂಡಿಂತೆಂಬರ್

ಕಂ॥ ಹರಿಯಾಳ್ಕೆ ನೀಮಾಮುಂ
ಹರಿಯಲ್ಲಿಯೆ ನಿನ್ನ ಕೊಳ್ವ ಸುಂಕಮನೀಯಲ್
ತ್ವರಿತಡೆ ಬಂದಪೆಮೆಂದಡೆ
ಕರಮೊಳ್ಳಿತ್ತದುವೆ ಸಾಲ್ಗುಮೆಂದು ಕಿರಾತಂ

೨೨

ವ॥ ಮಾಯಾವಡೆಯನುಪಸಂಹರಿಸಿ ಬಿರ್ದರನೆತ್ತಿ ನಾಯಕರ ಕೀಲಣೆಯಂ ಕಳ್ದೆದು ಪೋಗಿಮಿಂ ದಾಕಾಶಕ್ಕೊಗೆದು ಪಱಿಯ ರೂಪಾಗಿ ಬಂದು ನಾರದನಂ ಕಂಡೆನ್ನಂಗೆ ಿ[ಯ್ದ ಯೋ]ಿಗಮಂ ಕಂಡಿರಪ್ಪೊಡೇನೆಂದು ಪೇೞ್ವನೆನೆ ಕಂಡೆ ಿ[ಂ]ಿ ಕಣ್ಬೆತ್ತ ಫಲಮನುಂಡೆಂ ತಣಿದೆಂ ರಾಗದಿಂ ಕುಣಿದೆನೆಂದಂತೆ ಪೋಗಿ

ಕಂ॥ ದ್ವಾರಾವತಿಯಂ ಪರಿವೃತ
ವಾರಿಧಿಯಂ ಸೌಖ್ಯಕಾರಿಯಂ ನಾಯನಮನೋ
ಹಾರಿಯನಿಂದ್ರಾಸ್ಪದದನು
ಸಾರಿಯನೆಯ್ತಂದನನುಪಮಾಂಗನನಂಗಂ

೨೩

ವ॥ ಆಗಳ್ ನಾರದನಿದು ನೋಡು ಸಮುದ್ರಪರಿವೃತಂ ನಿಮ್ಮಯ್ಯನ ಪೊೞಲಿಲ್ಲಿ ವಿಮಾನದೊಳಿನಿಸಾನುಂ ಬೇಗಮಿಪ್ಪುದಾಂ ಪೋಗಿ ನಿನ್ನ ಬರವನಱಿಪಿ ಪೊೞಲೊಳಷ್ಟ ಶೋಭೆಗೆಯ್ಸಿ ಪಲರುಮಿದಿರ್ಗೊಳ್ವಂತು ಮಾಡಿದಪ್ಪೆ ನೆಂದೊಡಂತಾಗದು ನೀವೆನ್ನಬರವ ನಾರ್ಗಮಱಿಪದಿಲ್ಲಿರಿಮಾಂ ಪೋಗಿ ಕೆಲವತಿಶಯಂ ಮಾಡುತ್ತಂ ಕಾಡುತ್ತಂ ಪೊಕ್ಕಪ್ಪೆನೆಂದು ನಾರದನನಿರಿಸಿ ಮದನಂ ಬಂದು

ಕಂ॥ ಗಜ ತುರಗ ರಥ ಪದಾತಿ
ಧ್ವಜಿನಿಯನೊರ್ವೊದಲೆ ಪಡೆದು
ಕುರುಕುಳರಾಜಾ ತ್ಮಜೆಯನೊಡಗೊಂಡು ಬಂದಂ
ತಜೇಯಗತಮಾ ತ್ರಿರೂಪವಂ ಕೈಕೊಂಡಂ

೨೪

ವ॥ ಕೈಕೊಂಡು ದುರ್ಯೋಧನನ ಪೆರ್ಗಡೆಯೆಂ ಕೂಸನೊಡಗೊಂಡು ಬಂಬೆನೆಂದು ಸತ್ಯಭಾಮೆಗೆ ಪೇೞ್ದಿಟ್ಟಿಯಾಕೆಯ ನಂದನವದೊಳ್ ಬೀಡೆಲ್ಲಮಂ ಬಿಡಿಸಿ ನಿರವಶೇಷಂ ಬನಮೆಲ್ಲಮಂ ಕಿಡಿಸಿ ಪಡೆಯನುಪಸಂಹರಿಸಿ ವಿರೂಪನಪ್ಪ ತಪಸ್ವಿಯ ರೂಪಾಗಿ ಪೂಗೊಂಡು ಸತ್ಯಭಾಮೆಯ ಬಾವಿಯಂ ಕಂಡು ಪೊಕ್ಕು ಪಾದಪ್ರಕ್ಷಾಳ ನಂಗೆಯ್ದು ಬಾವಿಯ

ನೀರನೆನಸುಮುೞಯಲೀಯದೆ ಗುಂಡಿಗೆಯೊಳ್ ತೀವಿಕೊಂಡು ಪೊಱಮಡೆ ನೀರ್ಗೆವಂದ ಪೆಂಡಿರಿಂತೆಂಬುದೊಳವೆ ಬಾವಿಯ ನೀರನೆಲ್ಲಮನೀಗೊರವಂ ಕೊಂಡುಪೋದಪ್ಪೊನೆಂದು ಬೞಯಂ ತಗುಳೆ ಪೊೞಲ ನಡುವಣಲ್ಲಿ ಕೊಳ್ಳಿಂ ನಿಮ್ಮ ಬಾವಿಯ ನೀರನೆಂದು ಗುಂಡಿಗೆಯಂ ಬಾಗಿ ಸುರಿದಾಗಳ್

ಕಂ॥ ಒಡೆದುದೊ ಪೆರ್ಗೆಱೆ ಬೆಳ್ಪಂ
ಗೆಡೆದುದೊ ತೊಱೆ ಜಲಧಿ[ಯುಣ್ಕೆ] ಪೊಣ್ಮೆದುದೋ[ಮೇಣೆ]
ತಡೆಯದೆ ಮನುಷ್ಯಲೋಕಂ
ಗಿಡಿಸಲ್ ನೀರ್ ಪ್ರಳಯಮಾದ ತೆಱನೇತೆಱನೋ

೨೫

ವ॥ ಎಂದಾಯೆಡೆಯ ಜನಂಗಳ್ ಬೆರ್ಚಿ ಬೇಗಂ ಮದಿಲುಮಂ ಮನೆಗಳುಮಂ ನೆಱನೋಡುತ್ತಿರೆ ಗೊರವನ ರೂಪಮನಾ ನೀರುಮನುಪಸಂಹರಿಸಿ ಗುಜ್ಜನುಂ ಪೊಱಂಡನು[ಂ] ಮುರುಡನುಮಾಗಿ ಬರೆ ಕಂಡ [ವರ್ ನಗೆ] ಪೆಂಡಿರೊಳ್ ಕೆಲರಾನೆಯ ಕೆಯ್ಯಂತೆ ಮೂಗಂ ಮಾಡುತ್ತಂ ಕೆಲರ್ಗೆ ಕೋಡಗದ ಬಾಲದಂತಪ್ಪ ಬಾಲಮಂ ಕೆಲರ್ಗೆ ಬೆನ್ನೊಳೇಱ್ವ ಮೊಲೆಗಳುಮಂ ಕೆಲರ್ಗೆ ಕುಱುಯ ನಾಯಮೊಗಂಗಳಂತೆ ಮೊಗಂಗಳುಮಂ ಕೆಲರ್ ಪೆಂಡಿರ್ಗೆ ಗಡ್ಡಮಿಸೆಗಳುಮಂ ಮಾಡುತ್ತಂ ಮತ್ತಂ ಪೊೞಲ್ ಮೂಕಾಂಧ ಬದಿ[ರಾ]ದಿಗಳ್ಗ ಮೊಳಿತರ್ಕೆಂದಾಗಳ್

ಮ॥ ಕಿವುಡರ್ ಕೇಳ್ದರಪೂರ್ವಮಾಗೆ ನುಡಿದರ್ ಮೂಗರ್ ಪೊಱಂಡರ್ಕಳ
ಪ್ಪವರ್ಗಿಂಬಾದುವು ಮೆಯ್ ಪವಣ್ಗೆ ನಿಮಿರ್ದರ್ ಗುಜ್ಜರ್ ಕರಂ ಕೂಂಟರ
ಪ್ಪವರ್ಗಂ ಕಟ್ಟುವು ಕೂಂಟು ಮತ್ತೆ ಕುರುಡರ್ ಕಂಡರ್ ಮಹಾವ್ಯಾಧಿಕೆ
ಟ್ಟ [ವಿ]ದೇಂ ಚೋದ್ಯಮೊ ಪುಣ್ಯವಂತರೊಸೆದಾರ್ ಪೇೞಲ್ಲಿಗೆಟ್ಟಿಂದರೋ ೨೬

ವ॥ ಎಂದಿತೆಲ್ಲಿಯಂ ನೆಗೞ್ವತಿಶಯಂಗಳ್ಗೆ ಪೊೞಲುದ್ಭ್ರಾಂತುಗೊಳ್ವಾಗಳದು ವನುಪಸಂಹರಿಸಿ ಶ್ರೋತ್ರಿಯನಪ್ಪ ಬ್ರಾಹ್ಮಣನ್ ವೇಷಮಂ ಕೈಕೊಂಡು ಪೋಗಿ ಸತ್ಯಭಾಮೆಯಂ ಕಂಡು ರುಚಿಯಂ ಪೇ[ಱ್ದು] ಪರಸಿ ಸೇಸೆಯೆಂದು ದೂರ್ವಾಂ ಕು[ರ]ಮಂ ಕೊಟ್ಟು ಚತುರ್ವೇದಪಾರಗನೆಂ ತೀರ್ಥಯಾತ್ರೆಗೆಯ್ಯುತ್ತುಂ ನಿಮ್ಮ ಮಹಾದಾನಮಂ ಕೇಳ್ದು ಬಂದೆನಗ್ರಾ[ಸನ] ದೊಳುಣಲೀವುದೆಂದೊಡಿತ್ತೆನೆಂದಾಗಳೀ ತಂಗೆ ತಣಿಯುಣಲಿಕ್ಕಿಮೆನೆ

ಕಂ॥ ಪನ್ನಿರ್ಚ್ಛಾಸಿರ ಪಾರ್[ರು
ಮೆ]ನ್ನ ಗೃಹಾಂತರದೊಳಮೃತಸನ್ನಿಭಮಂ ಮೃ
ಷ್ಟಾನ್ನ ಮನುಂಡ್ಪುದೊ[ಮೇ]ಯೆ
ನಿನ್ನಂ ತಣಿಯೂಡದಿರ್ಪೆನೇನುಂ ಮರುಳೇ

೨೭

ವ॥ ಎಂದ ಮಾತಿಂಗೆ ಪಾರ್ವನಿನಿತೆ ಸಾಲ್ಗುಂ ಸ್ವಸ್ತಿಯೆಂದಿರ್ಪನ್ನೆಗಂ ಪಾರ್ವರ್ ನೆರವಿ ಕವಿತಂದುದಂ ಕಂಡೆನನಗ್ರಾಸನಮನಿತ್ತರೆಂದು ಸತ್ಯಭಾಮೆಯ ಕೆಯ್ಯೊಳ್ ಕಾಲಂ ಕರ್ಚಿಸಿಕೊಂಡು ಅಗ್ರಾಸನದೊಳ್ ಕುಳ್ಳಿರ್ದಾಗಳ್ ಪಂ[ತಿ]ಯೊಳಿರ್ದ ಪಾರ್ವರೆಲ್ಲ ಮೇನುಮಲ್ಲದೊನನಗ್ರಾಸನದೊಳಿರಿಸುವುದೆಂಬುದೇನೆಂದು ಮುಳಿದೆರ್ದು ಪೋಗಲ್ ಬಗೆದೊಡೆ

ಪೋಗದಂತೆಲ್ಲರುಮಂ ಸ್ತಂಭಿಸಿದೊಡೆನಿತಾನುಂ ಭಕ್ಷ್ಯರೂಪಸಹಿತಂ ಬಡ್ಡಿಸಿದೊಡಾಪೋಶನಂಗೊಂಡುಣಲ್ ಬಗೆವಾಗಳ್ ಅನಿಬರ ಮುಂದಣ್ ಕೂೞಿಲ್ಲಮನಪಹಾರಂಗೆಯ್ದು ತನ್ನ ತಳಿಗೆಯ ಕೂೞುಮನುಂಡು ಬಡ್ಡಿಸಿಮೆಂದಿರ್ದುದಂ ಕಂಡು ಮತ್ತಂ ಬಡ್ಡಿಸಿ

ಕಂ॥ ಎನಿತೆನಿತಂ ಬಿಡ್ಡಿಸಿದೊಡ
ಮನಿತುನಣಮುೞಿಯಲೀಯದಂತುಂದಡೆ ಮಾ
ಜನಕೆಂದಟ್ಟುದು ತಪ್ಪಡೆ
ಮನೆಗೆಂದುಟ್ಟುದುಮನಂತೆ ತವೆ ಬಡ್ಡಿಸಿದರ್

ವ॥ ಅಂತು ಮನೆಗಟ್ಟ ಬಾಣಸಿನ ಕೂೞಿಲ್ಲಮನುಂಡುಮವ್ವಾ ಪಸಿವು ಪೋಗದೆಂದಡರಸಿ ಚೋದ್ಯಂಬಟ್ಟು ಪಾರ್ವನ ಬೇಡಿದಾಗಡಿನ ನುಡಿಯಂ ಬಗೆ [ದಿ] ರಲಕ್ಕು ಮಾದೊಡೇನಿನ್ನುಂ ನೋೞ್ಪಿನೆಂದು

ಕಂ॥ ಪಾಂಡವ ಕೌರವ ನೃಪರೊಡ
ಗೊಂಡುದಧಿಯನಿಂದು ಬಪ್ಪರೆಂದಡಿಸಿದುದಂ
ಕೊಂಡಿಕ್ಕಿದೊಂತೆರಡುಂ
ತಂಡದ ಪಡೆಗಂದಿನಟ್ಟುದೆಲ್ಲಮನುಂಡಂ ೨೯

ವ॥ ಉಂಡುಮಬ್ಬಾ ನೀಮಪ್ಪಡೆ ಚಕ್ರವರ್ತಿಯ ಪಿರಿಯ ಮಹಾದೇವಿಯರಿದು ಪೆಸರಪ್ಪೊಡೆ ಸತ್ಯಭಾಮೆಯೆಂಬ ಪೆಂಪಿನ ಹೆಸರಿನ ಮಹಾದೇವಿಯೊರ್ವಂಗೆ ತಣಿಯುಣಲಿಕ್ಕಿಮೆಂದು ನುಡಿದು ಮಾಣಲಕ್ಕುಮೇಂ ತನ್ನಿಂ ಸಿಮೆಂದಾಗಳ್ ಸತ್ಯಭಾಮೆ ಮುಳಿದು ಪಾರ್ವನಲ್ಲಂ ಮಾಯಾವಿ ಬೇಗಮಿತನಂ ಪೊಱಮಡಿಸಿ ಕಳೆಯಿಮೆನೆ

ಮ॥ ಪುಸಿವಂತುಂ ಮುಳಿವಂತು ಮಾಡಿದುಣಿ [ಸೇಮಿಂ] ತಬ್ಬ ನೋಡಲ್ಕೆ ಕೂೞಿ
ಬಸವೇಂ ಕೊಳ್ಳಿರೆ ನಿಮ್ಮ ಕೂಟನೆನುತಂ ಕೆಯ್ಯಿಂ [ದಮೆರ್ದತ್ತು] ಥ
ರ್ದಿಸಿದಾಗಳ್ ಮನೆಪೂೞಿ ಕೂಟ್ ಕವಿವುದಂ ಕಂಡಳ್ಕಿಬೆಳ್ಕುತ್ತ ಬಾ
ಣಸಿಗಂ ಮಾಡಮನಾ ನರೇಂದ್ರವಧುವಂ ತಕ್ಕಯ್ಸಿಕೊಂಡೇಱಿದಂ ೩೦

ವ॥ ಅನಿತಂ ಮಾಡಿ ಕಾಮದೇವನಲ್ಲಿಂದಂ ಬಂದಾ ರೂಪಂ ಪಲ್ಲಟಿಸಿ ಕೆರಕುಂತುಱಿಯುಂ ಬೋೞದಲೆಯುಂ ಪಱಿದ ಕಪ್ಪಡಮುಂ ಬಡಮೆಯ್ಯುಂ ಕೋಲು ಕರಂಕೆಯುಂ ಬೆರಸು ಗುಂಡವೇಷಂ ತನಗಮರೆ ಬಂದು ರುಗ್ಮಿಣಿಮಹಾದೇವಿಯ ಮಾಡಮಂ ಪೊಕ್ಕ ನಾಗಳರಸಿ ಮುನ್ನಮೆ ತನೊಳಿಂತೆನುತಿರ್ದಳ್

ಕಂ॥ ಮೂಕಾಂಧ ಬಧಿರ ಕುಬ್ಜಾ

ನೀಕಕ್ಕಿಂಬಾದುವಿಂದೆ ಕುಸುಮಫಳಂಗಳ್
ಪ್ರಾಕಟಮಾದವು ಮರಂಗ
[ಳೇಕೋಯಿಂ]ದೆನ್ನ ಪುತ್ರಕಂ ಬಂದಪನೋ ೩೧

ವ॥ ಎನುತಮಿದಿರೊಳಿರ್ದು ನೋಡುತ್ತಂ ಬರವುಗಾಣದಿಂತೆಂದಳ್

ಕಂ॥ ಈಗಳೆನಿತಾನುಗುತಿಶಯ
ಮಾಗಿರ್ದುವು ಮೂಗುವಡುವ ದೆವಸಂಗಳೊಳಂ
ಕೋಗಿಲೆಗಳೆಲ್ಲ ದೆಸೆಯೊ[ಳ್
ಕೂ]ಗಿದವೋವೋ ಕುಮಾರನಿನ್ನುಂ ಬಾರಂ ೩೨

ವ॥ ಎಂಬನ್ನೆಗಂ ಬರ್ಪ [ಗುಂ]ಡನ ಬರವಂ ಕಂಡು ಧರ್ಮವಾತ್ಸಲ್ಯಕ್ಕೆ ದೇಶವ್ರತಿಗಮಿದಿರೇಟಲ್ವೇಟ್ಕುಮೆಂದು ರುಗ್ಮಿಣಿಮಹಾದೇವಿ ಬೇಗಮಿದಿರೆರ್ದಿರ್ಚ್ಚಾಕಾರ ನಿತ್ತಂ ಬನ್ನಿಮೆಂದೇಱಲಿಕ್ಕಿಂ ಕಾಲಂ ಕರ್ಚಿಸಿ ಕರಂಕೆಯುಮಂ ಕೋಲುಮಂ ಕೊಂಡು ಕೆಲದೊಳ್ ಸಾರ್ಚಿಟ್ಟು ಮೇಲೆ ಪಾಯ್ವ ನೊಣಮಂ ಬೀಸಿ ಕರಕಿನ ರಸಿಗೆಯಂ ತಾನೀಂಟುತ್ತಮಿರ್ದು ಬೋನಮಂ ತನ್ನಿಮೆಂದೊಡಂತು ತಂದುದನುಣ್ಬೆನಲ್ಲೆನಿಂದೆ ಬಿತ್ತಿದೊಡಿಂದೆ ಬೆಳೆದ ಕಟಿವೆಯಕ್ಕಿಯಂ ಸುರಭಿಯ ಪಾಲೊಳ್ ತುಯ್ಯಲನಾದಿತ್ಯನ ಕಿರಣದ ಬೆಂಕೆಯೊಳಟ್ಟುದನಲ್ಲದೆ ಉಣ್ಣೆನುಮ[ಲ್ಲ]ಮಂತಿಕ್ಕಲ್ ತೀರ್ವೊಡಿಕ್ಕಿಮೆಂದೊಡದುವಂ ನೋೞ್ಪೆನೆಂದು ಕಟಿವೆಯ ಬಿತ್ತಂ ತರಿಸಿ ಮನೆಯ ಮುಂದಣೆಡೆಯೊಳಗಟಿಸಿ ಪೊಕ್ಕು ಬಿತ್ತಂ ಪಿಡಿದು ನಿಂದು

ಪೃಥ್ವಿ॥

ಪತಿವ್ರತೆಯುಮಾನಪ್ಪೊಡಂ ಜಿನಮತೋಕ್ತಸ
ಮ್ಯಕ್ತ್ವಸಿದ್ಧಿಯೆನಗುಳ್ಳಡಂ ಪ್ರಕಟಶಾಸನದೇ (?)
ವತಾನಿಕರಮಿಗಳೆನ್ನ ಬಗೆ[ದಂ]ದಮಂ ಮಾಡಿಮೆಂ
ದತರ್ಕ್ಕಗುಣಯುಕ್ತೆ ಶುದ್ಧತರಭಾವದಿಂ ಬಿ[ತ್ತಿ]ದಳ್

ವ॥ ಬಿತ್ತಿದಾಗಳಲ್ಲಿಗಪ್ಪನಿತೆ ಮಱಿಕೊಂಡು ಕೆಸಱಾಗಿ ನಾಂಟಿ ಬೆಳದೆಱಿಗಿರ್ದಡಾಗಳ್ ಗುಂಡನೊಡೆಕೊಯ್ದು ಮೆಟ್ಟಿ ಪಲಂಬರಂ ಕರೆದು ಉಗುರೊಳ್ ಸುಲಿ ದಕ್ಕಿಯಂ ತಂದು ಮುಂದಿರ್ದ ಸುರಭಿಯಂ ಕಱಿದಾ ಪಾಲುಮಕ್ಕಿಯಂ ಪೊನ್ನ ಮಡಕೆಯೊಳ್ ಪೊಯಿದಾದಿತ್ಯನ ಕಿರಣಂ ಕೊಳುವೆಡೆಯೊಳಿಟ್ಟಡೆ ಕುದಿದು ಬೆಂದ ತುಯ್ಯಲಂ ತಂದಾಱಿಸಿ ಪೊನ್ನ ತಳಿಗೆಯೊಳ್ ಬಡಿಸಿದೊಡುಂಡು ಕಾಱುವಾಗಳರಿಸಿ ಕೆಯ್ಯೊಳಾಂತು ಕೊಂಡು ಕಳೆದು ಕೆಯ್ಯೆಱಿಯಿಸಿ ತಾನೆ ಮೆಯ್ಯಂ ಕರ್ಚಿ ಕರಂ ಶ್ರಮಂಬಟ್ಟಿರೆಂದು ಬೀಸುತಿರ್ದುದಂ ನೋಡಿ

ಕಂ॥ ಇಂತಪ್ಪ ಪತಿವ್ರತೆಮ
ತ್ತಿಂತ[ಪ್ಪ] ವಿಶುದ್ಧದರ್ಶನಾನ್ವಿತೆಯಂ ಕಂ
ಡಿಂತೆನಿತಂ ಕಾಡುವೆನಾ

ನಿಂ ತೋಱುವೆನೆನ್ನನೆಂಬ ಬಗೆಯಂ ಬಗೆದುಂ

ವ॥ ಬಗೆದಾಗಳೆ ವಿದ್ಯೆಯ ನೆನೆದಯ್ಯಿ ನಾರದನಂ ಬರಿಸಿ ಕಂಡೇಱಲಿಕ್ಕಿ ಕುಳ್ಳಿರ್ದೊನನೆನ್ನ ವಗನಂ ತ[೨][ಪ್ಪೆ][೨] ನೆಂದು ಪೋ [೩][ದಿ][೩]ರೆಲ್ಲಿದನೆಂದು ಕಣ್ಣನೀರಂ ನೆಗಪಿದಾಗಳಾ ಕಣ್ಣನೀ[೪][ರ್][೪] ದುಃಖಸಮುದ್ರದ ನೀರೊಳಾಟಲೀಯದೆ ನೆಗಪುವೆನೆಂಬಂತೆ ವಿದ್ಯಾಧರಲೋಕದೊಳಿದ್ದಾತನಂ ತಂದೆನೀಯಿರ್ದನೆಯೆನೆ ತೋಱುಮೆಂಬಲ್ಲಿಂ ಮುನ್ನಂ ದೇವಲೋಕದ ದೇವನಂತಾಗಿ ಕಾಮದೇವಂ ಕೆಯ್ಯ[ಂ] ಮುಗಿದು ಮೆಯ್ಯನಿಕ್ಕಿ ಪೊಡವಟ್ಟೊನನಿರ್ದಪ್ಪಿಕೊಂಡು ಮತ್ತಂ ಮತ್ತಮಪ್ಪಿಕೊಂಡು ತೊಡೆಯಮೇಲಿರಿಸಿ ನೋಡಿ ನಿನ್ನ ಬಾಲಕ್ರೀಡೆಯಂ ಕಾಣಲ್ಪಡೆದೆನಿಲ್ಲೆಂದದಂ ನೆನೆದು ಮ [೫][ನ್ಯು][೫] ಮಿಕ್ಕೊಡದೇವಿರಿದಬ್ಬ ತೋರ್ಪೆನೆಂದು